Swabhimani Sahakari
Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 23
Issue - 09
september - 2026

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಯುಕ್ತ ಸಹಕಾರಿಯ
ರಜತ ಮಹೋತ್ಸವ 2026



ಗಜವದನ ಬೇಡುವೆ ಗೌರೀತನಯ
ತ್ರಿಜಗವಂದಿತನೆ ಸುಜನರ ಪೊರೆವನೆ
ಪಾಶಾಂಕುಶಧರ ಪರಮ ಪವಿತ್ರ
ಮೂಷಿಕವಾಹನ ಮುನಿಜನ ಪ್ರೇಮಾ
ಮೋದದಿ ನಿನ್ನಯ ಪಾದವ ತೋರೋ

- ಶ್ರೀ ಪುರಂದರದಾಸ

ಸೆಪ್ಟೆಂಬರ್ 14,
ಗೌರಿ-ಗಣೇಶ




ಸೆಪ್ಟೆಂಬರ್ 05,
ಶಿಕ್ಷಕರ ದಿನಾಚರಣೆ

ಸೆಪ್ಟೆಂಬರ್ 04,
ಕೃಷ್ಣ ಜನ್ಮಾಷ್ಟಮಿ





ಸೆಪ್ಟೆಂಬರ್ 17,
ವಿಶ್ವಕರ್ಮ ಜಯಂತಿ



ಸೌಹಾರ್ದ ಸಹಕಾರಿಗಳ ಸಂಖ್ಯೆ: 6822

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1763



ಜಿ. ನಂಜನಗೌಡ

ಆತ್ಮಿಯ ಸೌಹಾರ್ದ ಸಹಕಾರಿ ಬಂದುಗಳಿಗೆ, ಶ್ರೀ ಕೃಷ್ಣಜನ್ಮಾಷ್ಟಮಿ, ವರಸಿದ್ಧಿವಿನಾಯಕ, ಅನಂತ ಪದ್ಮನಾಭ ಸ್ವಾಮಿ ಹಬ್ಬದ ಹಾಗೂ ಶಿಕ್ಷಕರ ದಿನಾಚರಣೆಯ  ರಾಜ್ಯದ ಸೌಹಾರ್ದ ಸಹಕಾರಿ ಸದಸ್ಯರಿಗೆ ಹಾರ್ದಿಕ ಶುಭಾಶಯಗಳು..

# ಸ್ವಾಯತ್ತತೆ, ಸ್ವಯಂ ಪ್ರೇರಿತ ಭಾಗವಹಿಸುವಿಕೆ ಸೌಹಾರ್ದ ಸಹಕಾರಿಗಳ ಹೆಮ್ಮೆ.

ಆತ್ಮಿಯ ಸೌಹಾರ್ದ ಸಹಕಾರಿ ಬಂದುಗಳಿಗೆ, ಶ್ರೀ ಕೃಷ್ಣಜನ್ಮಾಷ್ಟಮಿ, ವರಸಿದ್ಧಿ ವಿನಾಯಕ, ಅನಂತ ಪದ್ಮನಾಭ ಸ್ವಾಮಿ ಹಬ್ಬದ ಹಾಗೂ ಶಿಕ್ಷಕರ ದಿನಾಚರಣೆಯ  ರಾಜ್ಯದ ಸೌಹಾರ್ದ ಸಹಕಾರಿ ಸದಸ್ಯರಿಗೆ ಹಾರ್ದಿಕ ಶುಭಾಶಯಗಳು.

ರಾಜ್ಯದ ಸೌಹಾರ್ದ ಸಹಕಾರಿಗಳು ವಾರ್ಷಿಕ ಸಾಮಾನ್ಯ ಸಭೆಯು 25 ಸೆಪ್ಟಂಬರ್ 2026ರೊಳಗೆ ಕಾಯ್ದೆಯ ಪ್ರಕಾರ ಜರುಗಿಸಬೇಕಾಗಿರುತ್ತದೆ. ಸಹಕಾರವೆಂದರೆ ಕೇವಲ ಒಂದು ಸಂಸ್ಥೆ ಅಥವಾ ಸಂಘಟನೆಯಲ್ಲ, ಅದು ಒಗ್ಗಟ್ಟು, ಪರಸ್ಪರ ಸಹಾಯ, ವಿಶ್ವಾಸ, ಸಮಾನತೆ ಮತ್ತು ಸ್ವಾವಲಂಬನೆಯ ಮಹತ್ವದ ಚಳವಳಿ. "ಎಲ್ಲರಿಗಾಗಿ ಒಬ್ಬರು, ಒಬ್ಬರಿಗಾಗಿ ಎಲ್ಲರೂ" ಎಂಬ ಉದಾತ್ತ  ತತ್ವದ ಆಧಾರದ ಮೇಲೆ ಸಹಕಾರ ಕ್ಷೇತ್ರವು ಸಮಾಜದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ನಿರಂತರವಾಗಿ ಕೊಡುಗೆ ನೀಡುತ್ತಾ ಬಂದಿದೆ. ಸಹಕಾರಿ ಸಂಸ್ಥೆಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗ್ರಾಮೀಣದಲ್ಲಿ ರೈತರು, ಮಹಿಳೆಯರು, ಸಣ್ಣ ವ್ಯಾಪಾರಿಗಳು, ಕಾರ್ಮಿಕರು ಹಾಗೂ ಕಲಕುಶಲ ಕಾರ್ಮಿಕರಿಗೆ ನಗರದಲ್ಲಿ ಸಣ್ಣ ಸಣ್ಣ ಉದ್ಯಮಗಳಿಗೆ ಆರ್ಥಿಕ ನೆರವು ಮತ್ತು ಅವಕಾಶಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ 25ನೇ ವಾರ್ಷಿಕ ಸಾಮಾನ್ಯ ಸಭೆಯು 08 ಸೆಪ್ಟಂಬರ್ 2026 ರಂದು ಆಚರಿಸಿತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಹಾಗೂ ಸಂಭ್ರಮದ ಕ್ಷಣವಾಗಿದೆ. ಕಳೆದ 25 ವರ್ಷಗಳಲ್ಲಿ ಸೌಹಾರ್ದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪ್ರತಿಯೊಂದು ಸಹಕಾರಿಗಳು ನೀಡಿದ ಕೊಡುಗೆ ಅಮೂಲ್ಯವಾಗಿದೆ. ಈ ಐತಿಹಾಸಿಕ ಸಂದರ್ಭದಲ್ಲಿ ನಮ್ಮ ಸಾಧನೆಗಳನ್ನು ಸ್ಮರಿಸಿ, ಮುಂದಿನ ದಿನಗಳ ಅಭಿವೃದ್ಧಿಗೆ ಹೊಸ ಸಂಕಲ್ಪಗಳನ್ನು ಕೈಗೊಳ್ಳೋಣ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಮಹತ್ವದ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಆತ್ಮೀಯವಾಗಿ ವಿನಂತಿಸುತ್ತೇವೆ.

ವೇಗವಾಗಿ ಬೆಳೆಯುತ್ತಿರುವ ಹೊಸ ತಂತ್ರಜ್ಞಾನ ಅಳವಡಿಕೆ ಡಿಜಿಟಲ್ ತಂತ್ರಜ್ಞಾನ, ಆನ್ಲೈನ್ ಸೇವೆಗಳು, ಆಧುನಿಕ ಆಡಳಿತ ವ್ಯವಸ್ಥೆ, ಹಣಕಾಸಿನ ಶಿಸ್ತು ಮತ್ತು ಪಾರದರ್ಶಕತೆಯನ್ನು ಅಳವಡಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಹಾಗಾಗಿ ಎಲ್ಲಾ ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ವೇಗವಾದ, ವಿಶ್ವಾಸಾರ್ಹ ಮತ್ತು ಗುಣಮಟ್ಟದ ಸೇವೆ ನೀಡುವ ಮೂಲಕ  ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ.

ಪ್ರಸ್ತುತ ದಿನಗಳಲ್ಲಿ ವಿಶೇಷವಾಗಿ ಯುವಜನತೆ ಮತ್ತು ಮಹಿಳೆಯರನ್ನು ಸಹಕಾರ ಚಳವಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು. ಹೊಸ ಆಲೋಚನೆಗಳು, ಹೊಸ ತಂತ್ರಜ್ಞಾನ ಮತ್ತು ಉದ್ಯಮಶೀಲತೆಯನ್ನು ಸಹಕಾರದೊಂದಿಗೆ ಸಂಯೋಜಿಸಿದಾಗ ಗ್ರಾಮೀಣ ಆರ್ಥಿಕತೆಗೆ ಹೊಸ ಚೈತನ್ಯ ದೊರೆಯಲಿದೆ. ಸೌಹಾರ್ದ ಸಹಕಾರ ಕ್ಷೇತ್ರವು ಸದಸ್ಯರ ಸ್ವಾಯತ್ತತೆ, ಸ್ವಯಂಪ್ರೇರಿತ ಭಾಗವಹಿಸುವಿಕೆ ಮತ್ತು ಪರಸ್ಪರ ವಿಶ್ವಾಸಕ್ಕೆ ಹೆಚ್ಚಿನ ಮಹತ್ವ ನೀಡುತ್ತದೆ. ಈ ಮೌಲ್ಯಗಳನ್ನು ಉಳಿಸಿಕೊಂಡು, ಆಧುನಿಕ ಆಡಳಿತ ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸಹಕಾರ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಸಹಕಾರ ಕ್ಷೇತ್ರದ ಎಲ್ಲರ ಸಹಕಾರದೊಂದಿಗೆ ಸಂಸ್ಥೆಯನ್ನು ಮತ್ತಷ್ಟು ಪ್ರಗತಿಯತ್ತ ಕೊಂಡೊಯ್ಯುವ ಸಂಕಲ್ಪವನ್ನು ಮಾಡೋಣ. ಬಲಿಷ್ಠ ಮತ್ತು ಸುಸ್ಥಿರ ಸಹಕಾರ ವ್ಯವಸ್ಥೆಯನ್ನು ನಿರ್ಮಿಸೋಣ. ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಪ್ರತಿಯೊಬ್ಬರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳು.

**" ಸಹಕಾರ ಸೇ ಸಮೃದ್ಧಿ  "ಸಹಕಾರ ನಮ್ಮ ಶಕ್ತಿ, ಸಹಕಾರಿಗಳ ಪ್ರಗತಿ ನಮ್ಮ ಗುರಿ."**

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಸೂರ್ಯಕಾಂತ ರ್‍ಯಾಕಲೆ
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ ........ 2
ಸಂಪಾದಕೀಯ ........ 3
ಜ್ಞಾನ ಜ್ಯೋತಿ ........ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ 05–14
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 15–20
**ಲೇಖನಗಳು :**
ರಾಷ್ಟ್ರೀಯ ಆರ್ಥಿಕ ಸೇರ್ಪಡೆ (NSFI) (2025–30) ಯ ದೃಷ್ಟಿಕೋನ (VISION) : ಜನರ ಸಮಗ್ರ ಕಲ್ಯಾಣದತ್ತ ಎಲ್ಲರನ್ನೂ ಒಳಗೊಳ್ಳುವ ಆರ್ಥಿಕ ವ್ಯವಸ್ಥೆ ........ 21–25
ಸೌಹಾರ್ದ ಸಹಕಾರಿಗಳು ಜರುಗಿಸುವ ಸಾಮಾನ್ಯ ಸಭೆಯ ಮಹತ್ವ ಮತ್ತು ವಿಧಾನ ....... 28–32

# ಸಂಪಾದಕೀಯ

## ಸಂಪನ್ಮೂಲಗಳ ನಿರ್ವಹಣೆ

ಸೌಹಾರ್ದ ಸಹಕಾರಿಗಳಲ್ಲಿ ಸಂಪನ್ಮೂಲಗಳ ನಿರ್ವಹಣೆ ಮಹತ್ವದ ವಿಷಯ. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಲ್ಲಿ ಪ್ರಮುಖವಾದದ್ದು ಹಣ ಸಂಗ್ರಹಣೆ, ಹಣ ವಿಲೇವಾರಿ ಮತ್ತು ಹಣದಿಂದ ಹಣವನ್ನು ಮಾಡುವುದು. ಇಲ್ಲಿ ಸದಸ್ಯರೆ ಒಡೆಯರು. ಸದಸ್ಯರೆ ಗ್ರಾಹಕರು ಕೂಡ ಆಗಿರುವುದರಿಂದ ಅವರಿಂದ ಪಡೆದ ಹಣವನ್ನು ಅವರಗಳ ಅಭಿವೃದ್ಧಿಗಾಗಿಯೆ ಉಪಯೋಗ ಮಾಡಬೇಕಾಗಿರುತ್ತದೆ. ಇಲ್ಲಿ ಆಡಳಿತ ಮಂಡಳಿಯವರು ಸದಸ್ಯರ ಹಣದ ರಕ್ಷಣೆಯ ಮತ್ತು ಸದ್ವಿನಿಯೋಗ ಮಾಡುವ ಕೆಲಸ ನಿರ್ವಹಿಸುವುದಾಗಿದೆ. ಈ ಬಗ್ಗೆ ಆಡಳಿ ಮಂಡಳಿಯವರು ಈ ಸಂಪನ್ಮೂಲಗಳನ್ನು ಶಿಸ್ತು ಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ನಿರ್ವಹಣೆ ಬಗ್ಗೆ ಕ್ರಮವಿಡುವುದು ಅವಶ್ಯಕ.

ಸಂಗ್ರಹವಾಗುವ 100 ರೂಪಾಯಿಯನ್ನು ಪೂರ್ಣವಾಗಿ ವಿಲೇವಾರಿ ಮಾಡಕೂಡದು. ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯ ಸುತ್ತೋಲೆಯಂತೆ ಶೇಕಡಾ 80% ಮಾತ್ರ ಸಾಲ ನೀಡಬಹುದಾಗಿದೆ. 20% ಹಣವನ್ನು ಕಾಯ್ದೆಯಂತೆ ಹೂಡಿಕೆ ಮಾಡಬೇಕು. ಆದರೆ ಸಂಗ್ರಹವಾದ 100 ರೂಪಾಯಿಗಳಿಗೆ ಬಡ್ಡಿ ನೀಡಲೇಬೇಕು ಹೀಗಾಗಿ ಸಹಕಾರಿಗಳಿಗೆ ಇರುವ ಮಾರ್ಜಿನ್ ಹಣ ಕಡಿಮೆ. ಈ ಹಣದಿಂದಲೇ ಸಹಕಾರಿಯ ಎಲ್ಲ ಕಾರ್ಯಚಟುಟಿಕೆಗಳಿಗೆ ಹಣ ಉಪಯೋಗಿಸಬೇಕಾಗುತ್ತದೆ. ಉಳಿಕೆ 20% ಹಣ ಕಾಯ್ದೆಯಂತೆ ಹೂಡಿಕೆಯಲ್ಲಿರಬೇಕು. ಲಿಕ್ವಿಡ್ ನಗದು ಇರಬೇಕು. ಅಂದರೆ ಸುರಕ್ಷತೆ, ಭದ್ರತೆ, ಹಾಗೂ ಲಿಕ್ವಿಡಿಟಿಗಳ ಜಾಗರೋಕತೆ ವಹಿಸುವುದು ಅಗತ್ಯ. ಯಾವುದೇ ಸದಸ್ಯರಿಗೂ ಠೇವಣಿಯ ಬಗ್ಗೆ ಮೋಸ ವಂಚನೆಯಾಗದಿರುವಂತೆ ಸಂಪನ್ಮೂಲಗಳ ನಿರ್ವಹಣೆ ಮಾಡಬೇಕು. ಇದು ಸಹಕಾರಿಗೆ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಹಕಾರಿಗಳು ಗಮನಿಸುವುದು ಅವಶ್ಯಕ.

ಇಂದಿನ ಪೈಪೋಟಿ ಯುಗದಲ್ಲಿ ಖಾಸಗೀಕರಣ, ಜಾಗತೀಕರಣ ಹಾಗೂ ಉದಾರೀಕರಣದ ನೇರಳಿನಲ್ಲಿ ನಾವುಗಳು ಕಾರ್ಯ ನಿರ್ವಹಿಸುತ್ತಿದ್ದೇವೆ. ಖಾಸಗಿ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು, ವಿದೇಶಿ ಬ್ಯಾಂಕುಗಳು, ಸಣ್ಣ ಹಣಕಾಸು ಬ್ಯಾಂಕುಗಳು, ಖಾಸಗಿ ಲೇವಾದೇವಿ ಸಂಸ್ಥೆಗಳು ಹೀಗೆ ಹಲವು ವಿಧವಾದ ಹಣಕಾಸಿನ ವ್ಯವಸ್ಥೆಯಲ್ಲಿ ಸೌಹಾರ್ದ ಸಹಕಾರಿಗಳು ಯಾವುದೇ ಆಮಿಷಗಳಿಗೆ ಒಳಗಾಗದಂತೆ ಸದಸ್ಯರಿಗೆ, ಹೂಡಿಕೆದಾರರಿಗೆ ಮೋಸ, ವಚ್ಚನೆ, ವಿಶ್ವಾಸ, ದ್ರೋಹ, ಅನ್ಯಾಯ ಮಾಡದಂತೆ ಸದಸ್ಯರ ಸದುಪಯೋಗಕ್ಕೆ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಸೀಮಿತಗೊಳಿಸುವ ಅಗತ್ಯತೆ ಇದೆ. ಈ ಬಗ್ಗೆ ಸಹಕಾರಿಗಳು ಅತ್ಯಂತ ಕಾಳಜಿಯಿಂದ ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಆಶಯ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಪ್ರಜ್ಞಾ"

ಭಾಗ–2

ನಮ್ಮ ಮನಸ್ಸು ಶ್ರದ್ಧಾ, ವೀರ್ಯ, ಸ್ಮೃತಿ, ಸಮಾಧಿ, ಪ್ರಜ್ಞೆಗಳಿಂದ ತುಂಬಿಕೊಂಡಾಗ ನಮ್ಮ ಜೀವನದಲ್ಲಿ ಶಾಂತಿ–ಸಮಾಧಾನಗಳು ನೆಲೆಸುತ್ತವೆ. ಬದುಕು ಸಾರ್ಥಕವಾಗುತ್ತದೆ. ಇಲ್ಲಿಯವರೆಗೆ ಮೊದಲಿನ ನಾಲ್ಕು ಅಂಗಗಳನ್ನು ನೋಡಿದ್ದೇವೆ. ಈಗ ಕೊನೆಯದಾದ ಪ್ರಜ್ಞೆಯ ಚಿಂತನ.

ಪ್ರಜ್ಞೆಯ ವಸ್ತುವಿನ ನಿಜವಾದ ಸ್ವರೂಪ ತಿಳಿಸಿಕೊಡುತ್ತದೆ. ಸಾಮಾನ್ಯವಾಗಿ ವಸ್ತುವಿಗೆ ಎರಡು ರೂಪ. ಒಂದು ತೋರಿಕೆಯ ಹುಸಿರೂಪ ಇನ್ನೊಂದು ಇರುವಿಕೆಯ ನಿಜರೂಪ, ನಾಟಕದಲ್ಲಿ ಪಾತ್ರಧಾರಿಯ ಒಮ್ಮೆ ರಾಜನ ಪಾತ್ರಧರಿಸುತ್ತಾನೆ, ಮತ್ತೊಮ್ಮೆ ಭಿಕ್ಷುಕನ ಪಾತ್ರಧರಿಸುತ್ತಾನೆ. ವಿಚಾರ ಮಾಡಿ ನೋಡಿದರೆ ಅವನು ರಾಜನೂ ಅಲ್ಲ, ಭಿಕ್ಷುಕನೂ ಅಲ್ಲ. ಅವನೊಬ್ಬ ನಟನು ಮಾತ್ರ, ಅದು ಅವನ ರೂಪ! ಈ ಸತ್ಯ ಸಂಗತಿಯನ್ನು ತಿಳಿಸಿಕೊಡುವುದೇ ಪ್ರಜ್ಞಾನೇತ್ರ!

ಈ ಜಗತ್ತು ಒಳಿತು–ಕೆಡುಕು, ಸತ್ಯ–ಅಸತ್ಯ, ನಿತ್ಯ–ಅನಿತ್ಯ ವಸ್ತುಗಳ ಸಮ್ಮಿಶ್ರಣವಾಗಿದೆ. ಜಲಜನಕದ ಎರಡು ಪರಮಾಣುಗಳು ಆಮ್ಲಜನಕ ಒಂದು ಪರಮಾಣು ಸೇರಿಯೇ ನೀರಾಗುತ್ತದೆ. ಒಂದರಿಂದಲೇ ನೀರಾಗುವುದಿಲ್ಲ. ಹಾಗೆಯೇ ಸಜ್ಜನರು, ದುರ್ಜನರು, ಸೇರಿಯೇ ಜಗತ್ತಾಗಿದೆ. ಅಂತೆಯೇ ಬಸವಣ್ಣನವರು ಹೀಗೆ ಹೇಳಿದರು.

**ಸಾರ; ಸಜ್ಜನರ ಸಂಗವ ಮಾಡುವುದು**
**ದೂರ; ದುರ್ಜನರ ಸಂಗ ಬೇಡವಯ್ಯಾ!**
**ಆವ ಹಾವಾದಡೇನು, ವಿಷವೊಂದೆ;**
**ಅಂತವರ ಸಂಗ ಬೇಡವಯ್ಯಾ**
**ಅಂತರಂಗ ಶುದ್ಧವಿಲ್ಲದವರ ಸಂಗ**
**ಸಿಂಗಿ ಕಾಳಕೂಟ ವಿಷವೊ, ಕೂಡಲಸಂಗಮದೇವಾ!**

ಬಿಳಿಯ ಬಟ್ಟೆಯ ಮೇಲೆ ಎಲ್ಲಿಯಾದರೂ ಒಂದು ಸಣ್ಣ ಕಪ್ಪು ಚುಕ್ಕೆ ಇದ್ದರೂ ಸಾಕು ಅದು ಎದ್ದು ಕಾಣುತ್ತದೆ. ಆದರೆ ಅದಕ್ಕಿಂತಲೂ ಬಿಳಿಬಟ್ಟೆ ನೂರುಪಟ್ಟು, ಸಾವಿರಪಟ್ಟು ಎದ್ದು ಕಾಣಿಸಲು ಪ್ರಾರಂಭಿಸುತ್ತದೆ. ಹಾಗೆಯೇ ಈ ಪ್ರಪಂಚದಲ್ಲಿ ಎಲ್ಲಿಯಾದರೂ ಒಬ್ಬಿಬ್ಬರು ದುರ್ಜನರಿದ್ದರೆ ಅವರು ಎದ್ದು ಕಾಣುತ್ತಾರೆ ನಿಜ. ಆದರೆ ಅವರಿಂದಾಗಿ ಸಜ್ಜನರ ಬೆಳಕು ಕೀರ್ತಿ ಸಾವಿರ ಪಟ್ಟು ಹೆಚ್ಚುತ್ತದೆ.

ಅಂತೆಯೇ ಈ ಜಗತ್ತು ವೈವಿಧ್ಯಮಯವಾಗಿದೆ. ನೀರು ಒಂದೇಯಾದರೂ, ಮನೆಯ ಒಳಗೆ ಬರುವ ನೀರೇ ಬೇರೆ, ಹೊರಗೆ ಬರುವ ನೀರೇ ಬೇರೆ! ಮನೆಯ ಒಳಗೆ ಬರುವ ನೀರು ಪವಿತ್ರ ಪರಿಶುದ್ಧ ಮನೆಯ ಹೊರಗೆ ಹೋಗುವ ನೀರು ಅಪವಿತ್ರ. ಅಪರಿಶುದ್ಧ. ಎಮ್ಮೆಯ ಹಾಲು, ಅಲ್ಕೊಹಾಲು ಎರಡೂ ಪಾನೀಯಗಳೆ, ಆದರೆ ಇವೆರಡಲ್ಲಿ ಯಾವುದನ್ನು ಕುಡಿಯಬೇಕು, ಯಾವುದನ್ನು ಕುಡಿಯಬಾರದು ಎಂದು ತಿಳಿಸಿಕೊಡುವ ಬೌದ್ಧಿಕ ಸಾಮರ್ಥ್ಯವೇ ಪ್ರಜ್ಞೆ, ವಿದ್ಯಾವಂತರೆಲ್ಲರೂ ಪ್ರಜ್ಞಾವಂತರಾಗಿರುತ್ತಾರೆಂದು ಹೇಳಲು ಬರುವುದಿಲ್ಲ. ಏಕೆಂದರೆ ಎಷ್ಟೋಜನ ವಿದ್ಯಾವಂತೆ ಧೂಮ್ರಪಾನ, ತಂಬಾಕು ಸೇವನೆ, ಮೊದಲಾದ ವ್ಯಸನಗಳ ತಗ್ಗು ದಿನ್ನೆಗಳಿವೆ, ಹಸಿವೆ–ತೃಷೆ ಮೊದಲಾದ ಷಡೂರ್ಮಿಗಳೆಂಬ ಮುಳ್ಳು ಕಲ್ಲುಗಳಿವೆ, ಇಂಥ ಸಮ್ಮಿಶ್ರ ಪ್ರಪಂಚದಲ್ಲಿ ನಮಗೆ ಯಾವುದು ಯೋಗ್ಯ, ಯಾವುದು ಆಯೋಗ್ಯ ಎಂದು ತಿಳಿಸಿಕೊಡುವುದೇ ಪ್ರಜ್ಞೆ.

ಹೊಸ ಜೀವನದ ಹೊಂಗನಸನ್ನು ಹೊತ್ತು ಬಂದಿದ್ದ ಸೀತಾದೇವಿಯು ಕೂಡಾ ಆಕಸ್ಮಿಕವಾಗಿ ನಡೆದ ಘಟನೆಯಿಂದಾಗಿ ವನವಾಸಕ್ಕೆ ಹೋದಳು. ಯತ್ರ ರಾಮಃ ತತ್ರ ಅಯೋಧ್ಯಾ, ಶ್ರೀರಾಮನಿರುವಲ್ಲಿಯೇ ಅಯೋಧ್ಯವಿದೆ ಎಂದು ಸೀತಾದೇವಿಯು ನಂಬಿ ನಡೆದು ಆದರ್ಶ ನಾರಿ ಮಹಾಪತಿವ್ರತೆ ಎನಿಸಿದಳು. ಹೀಗೆ ಶ್ರೀರಾಮ ಹಾಗೂ ಸೀತಾದೇವಿಯು ಬೆಳೆಯಲು ಕಾರಣವಾದುದೇ ರಾಮಾಯಣ ಅಥವಾ ಸೀತಾಯಣ! ಹೀಗೆ ಪ್ರತಿಯೊಬ್ಬರ ಜೀವನದಲ್ಲಿಯೂ ಒಳಿತೂ–ಕೆಡುಕು ಎರಡೂ ಬರುತ್ತವೆ. ಆಗ ಯಾವುದನ್ನು ಹಿಡಿಯಬೇಕು ಯಾವುದನ್ನು ಬಿಡಬೇಕು ಎಂದು ಬುದ್ಧಿಹೇಳಿ ನಮ್ಮನ್ನು ಸನ್ಮಾರ್ಗದಲ್ಲಿ ಮುನ್ನೆಡೆಸಲು ಕಾರಣವಾಗುವುದೇ ಈ ಪ್ರಜ್ಞೆ!!

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಆಗಸ್ಟ್–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 755 | 792 | 382 | 276 | 2205 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 227 | 287 | 275 | 91 | 880 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 06 | 00 | 00 | 00 | 06 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 976 | 1079 | 657 | 367 | 3079 |
| ಆಗಸ್ಟ್ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 880 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 06 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7666 | 1481 | 2357 | 838 | 12342 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1205 | 280 | 631 | 217 | 2333 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6461 | 1201 | 1726 | 621 | 10009 |
| ಆಗಸ್ಟ್ 2026ರ ತಿಂಗಳಿನಲ್ಲಿ ಒಟ್ಟು 111 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# ಸಹಕಾರ ಸಚಿವರಾಗಿ ಹಿರಿಯ ಸಹಕಾರಿ ಧುರೀಣ ಶ್ರೀ ಲಕ್ಷ್ಮಣ ಎಸ್. ಸವದಿ ಸಹಕಾರಿಗಳಿಗೆ ಹೆಮ್ಮೆ ಹಾಗೂ ಸಂತಸ



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರರವರ ನೇತೃತ್ವದ ನೂತನ ಸರಕಾರದಲ್ಲಿ ಸಹಕಾರ ಸಚಿವರಾಗಿ ನೇಮಕರಾಗಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಸಮಸ್ತ ಸಹಕಾರಿಗಳಿಗೆ ಸಂತಸವನ್ನು ತಂದಿದೆ. ಮೃದು ಸ್ವಭಾವದ ದಿಟ್ಟ ಹಾಗೂ ನೇರನುಡಿಯ ಸರಳ ಸಜ್ಜನಿಕೆಯ ವ್ಯಕ್ತಿತ್ವ.

ಶ್ರೀ ಲಕ್ಷ್ಮಣ ಎಸ್. ಸವದಿಯವರು ಹಿರಿಯ ಸಹಕಾರಿ ಧುರೀಣರು. 16 ಫೆಬ್ರವರಿ 1960 ಜನನ, ತಂದೆ ಸಂಗಪ್ಪ ಸವದಿಯವರು ಕೃಷಿಕರು, 1978ರಲ್ಲಿ ಎಸ್.ಎಸ್.ಎಂ.ಎಸ್ ಕಾಲೇಜು ಅಥಣಿಯಲ್ಲಿ ಪಿ.ಯು.ಸಿ ಶಿಕ್ಷಣ ಪೂರೈಸಿದ್ದಾರೆ. ಪತ್ನಿ ಶ್ರೀಮತಿ ಪುಷ್ಪಾ 3 ಜನ ಗಂಡು ಮಕ್ಕಳು, ಅಥಣಿ ತಾಲ್ಲೂಕಿನ ನಾಗನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಪ್ರಾರಂಭಿಸಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ಬೆಳಗಾವಿ ನಂತರದಲ್ಲಿ ಅಪೆಕ್ಸ್ ಬ್ಯಾಂಕ್‌ವರೆಗೂ ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವ. ಸ್ವತಃ ಕೃಷಿಕರು. ಸಹಕಾರಿಗಳ ಹಾಗೂ ಕೃಷಿ ವರ್ಗದವರ ಸಮಸ್ಯೆಗಳನ್ನು ಬಲ್ಲವರು. ಎಲ್ಲಕೂ ಮೇಲಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಸರಕಾರದ ನಿರ್ಣಯಗಳನ್ನು ಚಾಚೂ ತಪ್ಪದೆ ಜಾರಿಗೊಳಿಸುವ ಸ್ವಭಾವ.

2004ರಲ್ಲಿ ಪ್ರಥಮ ಬಾರಿಗೆ ಅಥಣಿಯಿಂದ ಶಾಸಕರಾಗಿ ಆಯ್ಕೆ ನಂತರ 2008, 13 ರಲ್ಲಿಯೂ ಆಯ್ಕೆ, 2019 ಆಗಸ್ಟ್ 20 ರಲ್ಲಿ ಶ್ರೀ ಯಡಿಯೂರಪ್ಪ ನವರ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ಮಂತ್ರಿಯಾಗಿ ನೇಮಕ. ಕರ್ನಾಟಕ ರಾಜ್ಯದ ಯಡಿಯೂರಪ್ಪನವರ ನೇತೃತ್ವದಲ್ಲಿ ರಾಜ್ಯದ 8ನೇ ಉಪಮುಖ್ಯಮಂತ್ರಿಯಾಗಿ 2019 ರಿಂದ 2021 ರವರೆಗೆ ಕಾರ್ಯನಿರ್ವಹಿಸಿದ ಅನುಭವ. 2020ರಲ್ಲಿ ಶ್ರೀಯುತರು ವಿಧಾನ ಪರಿಷತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ.

ಈ ಹಿಂದೆ ಶ್ರೀಯುತರು ಸಹಕಾರ ಸಚಿವರಾಗಿದ್ದಾಗ ರೈತರಿಗೆ ಶೇಕಡಾ 1% ರಿಯಾಯಿತಿ ಬಡ್ಡಿದರದಲ್ಲಿ ಕೃಷಿ ಸಾಲ ನೀಡಲು ಕ್ರಮ ಜರುಗಿಸಿರುವುದು ಇವರ ಹೆಗ್ಗಳಿಕೆ. ವೈದ್ಯನಾಥನ್ ಸಮಿತಿ ವರದಿ ಜಾರಿಗೆ ಕ್ರಮವಿಟ್ಟಿರುವುದು ಶ್ರೀಯುತರು ಸಹಕಾರ ಸಚಿವರಾಗಿದ್ದಾಗ ಎಂಬುದನ್ನು ಹೆಮ್ಮೆಯಿಂದ ಹೇಳಬಹುದು.

ಸಹಕಾರ ಚಳುವಳಿಯನ್ನು ಬಲಪಡಿಸಿ ಮುನ್ನಡೆಸುವ ಜವಾಬ್ದಾರಿ ಶ್ರೀಯುತರ ಹೆಗಲ ಮೇಲೆ ಇದೆ. ಈ ಹಿಂದೆ ಶ್ರೀ ಸಿದ್ಧರಾಮಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಶ್ರೀಯುತರನ್ನು ಸಹಕಾರಿ ಕಾಯ್ದೆಗಳ ತಿದ್ದುಪಡಿ ಸಲಹಾ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದಾಗ ಶ್ರೀಯುತರು ರಾಜ್ಯಾದ್ಯಂತ ಪ್ರವಾಸ ಮಾಡಿ ಸಹಕಾರಿಗಳನ್ನು ಹಾಗೂ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳನ್ನು ಭೇಟಿ ಮಾಡಿ 1959ರ ಸಹಕಾರಿ ಸಂಘಗಳ ಕಾಯ್ದೆಗೆ ಹಾಗೂ 1997 ಸೌಹಾರ್ದ ಸಹಕಾರಿ ಕಾಯ್ದೆಗೆ ಹಲವಾರು ತಿದ್ದುಪಡಿಗಳನ್ನು ಸೂಚಿಸಿ ವರದಿ ಸಲ್ಲಿಸಿದ್ದಾರೆ.

ಶ್ರೀಯುತರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು, ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರರವರು ಮಾಜಿ ಅಧ್ಯಕ್ಷರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಹೆಚ್.ವಿ. ರಾಜೀವರವರು, ಆಡಳಿತ ಮಂಡಳಿಯವರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳು ಹಾಗೂ ಸಿಬ್ಬಂದಿಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಸಹಕಾರ ಮಹಾಮಂಡಳದ ನಿರ್ದೇಶಕರಾಗಿ ಸತತ 4ನೇ ಬಾರಿಗೆ ಶ್ರೀ ಜಗದೀಶ ಕವಟಗಿಮಠ ಆಯ್ಕೆ

## ಸದಾ ಜನರ ಸೇವೆಯಲ್ಲೇ ಜಗದಗಲದ ಸಂತೃಪ್ತಿ ಕಾಣುವ ಜಗದೀಶ ಕವಟಗಿಮಠ

## 25 ವರ್ಷಗಳಿಂದ ಸಾಮಾಜಿಕ ಕಾರ್ಯ, ಜನಮಾನಸದಲ್ಲಿ ನೆಲೆ ನಿಂತ ಉದಾರಿ



ಶ್ರೀಯುತರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸತತ 4ನೇ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿರುವುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರಿಗೆ, ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಸಂತಸವನ್ನು ತಂದಿದೆ. ಸ್ವಾಭಿಮಾನಿ ಸಹಕಾರಿ ಬಳಗದ ವತಿಯಿಂದ ಶ್ರೀ ಹೃದಯ ಪೂರ್ವಕ ಅಭಿನಂದನೆಗಳು.

### ಕಿರು ಪರಿಚಯ

ಚಿಕ್ಕೋಡಿಯ ಕವಟಗಿಮಠ ಮನೆತನ ಕಳೆದ 3 ತಲೆಮಾರುಗಳಿಂದ ವೈವಿಧ್ಯಮಯವಾದ ಸೇವಾ ಕ್ಷೇತ್ರಗಳಿಂದ ಗುರುತಿಸಿಕೊಂಡಿರುವ ಮನೆತನ. ಸುಸಂಸ್ಕೃತ ಕೃಷಿ ಕುಟುಂಬ. ಈ ಮನೆತನದಲ್ಲಿ 1970ರ ಮೇ 09 ಜಗದೀಶರ ಜನ್ಮದಿನ. ಬಿ.ಎ. ಎಲ್.ಎಲ್.ಬಿ. ಪದವೀಧರರಾಗಿರುವ ಶ್ರೀಯುತರು ತಮ್ಮ ಪೂಜ್ಯ ತಂದೆಯವರಾದ ದಿ. ಶ್ರೀ ಎಂ.ಕೆ ಕವಟಗಿಮಠರವರು ಅವರ ಅಜ್ಜ ದಿವಂಗತ ಕಲ್ಲಯ್ಯಸ್ವಾಮಿಗಳು ತಂದೆ ಶ್ರೀ ದಿವಂಗತ ಶ್ರೀ ಮಲ್ಲಯ್ಯ ಸ್ವಾಮಿಗಳು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯುತ್ತಿರುವ ಪ್ರಗತಿಪರ ಯುವ ಸಹಕಾರಿ. ಎರಡನೇ ಬಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಬೆಳಗಾವಿ ವಿಭಾಗದಿಂದ ಆಯ್ಕೆಯಾಗಿರುವ ಶ್ರೀಯುತರು ಅವಿರೋಧವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಶ್ರೀಯುತರು ಶ್ರೀ ಸಿದ್ಧೇಶ್ವರ ಹಾಲು ಉತ್ಪಾದಕರ ಸಹಕಾರಿ ಸಂಘದ ಚಿಕ್ಕೋಡಿಯ ನಿರ್ದೇಶಕರಾಗಿ, ಜಿಲ್ಲಾ ಸಹಕಾರಿ ಯೂನಿಯನ್ ಬೆಳಗಾವಿಯ ಕಾರ್ಯಾಧ್ಯಕ್ಷರಾಗಿ, ಶ್ರೀ ನಾಗಲಿಂಗೇಶ್ವರ ಹೌಸಿಂಗ್ ಸೊಸಾಯಿಟಿ ಚಿಕ್ಕೋಡಿಯ ನಿರ್ದೇಶಕರಾಗಿ, ಕೆ.ಎಲ್.ಇ. ಕಾನೂನು ಮಹಾವಿದ್ಯಾಲಯ ಚಿಕ್ಕೋಡಿ ಇದರ ಸ್ಥಳೀಯ ಆಡಳಿತ ಮಂಡಳಿ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತು ಚಿಕ್ಕೋಡಿ ತಾಲ್ಲೂಕಾ ಘಟಕದ ಕೋಶಾಧ್ಯಕ್ಷರಾಗಿ, ಸಿ.ಎಲ್.ಇ. ಸಂಸ್ಥೆಯ ಹಳೆಯ ವಿದ್ಯಾರ್ಥಿ ಬಳಗದ ಸಂಸ್ಥಾಪಕ ಅಧ್ಯಕ್ಷರಾಗಿ, ಚಿಕ್ಕೋಡಿ ಪುರಸಭೆಯ ಅಧ್ಯಕ್ಷರಾಗಿ, ಸದಸ್ಯರಾಗಿ ಜೊತೆಗೆ ಹಲವಾರು ಸಂಘ ಸಂಸ್ಥೆಗಳಿಗೆ ಪದಾಧಿಕಾರಿಗಳಾಗಿ ಪ್ರೇರಕರಾಗಿ ಅವರು ಸಲ್ಲಿಸುತ್ತಿರುವ ಸೇವೆ ಸ್ಮರಣೀಯ.

ಚಿಕ್ಕೋಡಿಯ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಿರುವ ಶ್ರೀಯುತರು ಸಾಯಿ ಪರಿವಾರದ ಮೂಲಕ ಪ್ರತಿ ವರ್ಷ ಉಚಿತ ಸಾಮೂಹಿಕ ವಿವಾಹ, ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳ ಹಂಚಿಕೆ, ಸಾಯಿ ಮಂದಿರದ ವಾರ್ಷಿಕೋತ್ಸವದ ಕಾಲಕ್ಕೆ ಮೂರು ದಿನಗಳ ಮಟ್ಟಿಗೆ ಹಮ್ಮಿಕೊಳ್ಳುವ ವಿವಿಧ ವಿಧಾಯಕ ಕಾರ್ಯಕ್ರಮಗಳು ಈ ಭಾಗದ ಜನರ ಮನ, ಮನೆಗಳಿಗೆ ಮೆಚ್ಚುಗೆಯಾಗಿವೆ. ಕಳೆದ 15 ವರ್ಷಕ್ಕೂ ಮಿಕ್ಕಿ ಕನ್ನಡ ಸಾಹಿತ್ಯ ಪರಿಷತ್ತು ಈ ಗಡಿಭಾಗದಲ್ಲಿ ಸಕ್ರಿಯವಾಗಿರುವುದರ ಜೊತೆಗೆ ಅದು ಹಲವು ಕಾರ್ಯಕ್ರಮಗಳನ್ನು ಹಾಗೂ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲು ಇವರು ಪ್ರೇರಕರಾಗಿದ್ದಾರೆ. ಇಂದು ಈ ಭಾಗದಲ್ಲಿ ಯಾವುದೇ ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾದರೆ ಅದಕ್ಕೆ ಇವರ ಉಪಸ್ಥಿತಿ, ಮಾರ್ಗದರ್ಶನ, ಮುಖಂಡತ್ವ ಅಗತ್ಯ ಎನ್ನುವಷ್ಟರ ಮಟ್ಟಿಗೆ ಶ್ರೀಯುತರು ತೊಡಗಿಸಿಕೊಂಡಿದ್ದಾರೆ. ಶ್ರೀಯುತರು ದಿ.ಚಿಕ್ಕೋಡಿ ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ನಿ., ನಿಪ್ಪಾಣಿ ಇದರ ಅಧ್ಯಕ್ಷರಾಗಿ ಕಳೆದ ಎರಡು ಅವಧಿಗಳಿಗೆ ಇದನ್ನು ಮುನ್ನಡೆಸುತ್ತಿದ್ದಾರೆ. ದಾಖಲೆ ಪ್ರಮಾಣದ ಲಾಭಗಳಿಕೆಯನ್ನು ಇದಕ್ಕೆ ತಂದು ಕೊಟ್ಟಿದ್ದಾರೆ. ಸಂಘದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಬರೆದಿದ್ದಾರೆ.

ಶ್ರೀಯುತರು ದಿನಾಂಕ 14.08.2017 ರಿಂದ 04.08.2022ರವರೆಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾಗಿ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಶ್ರೀಯುತರು ಸಿ.ಎಲ್.ಇ. ಶಿಕ್ಷಣ ಸಂಸ್ಥೆ ಚಿಕ್ಕೋಡಿಯ ಕ್ರಿಯಾಶೀಲ ಕಾರ್ಯದರ್ಶಿಯಾಗಿ ಕೈಗೊಂಡಿರುವ ಕ್ರಮಗಳು ಗಮನಾರ್ಹವಾಗಿವೆ. ಸಂಸ್ಥೆಯು ತನ್ನ ಹದಿನಾಲ್ಕನೇಯ ಅಂಗ ಸಂಸ್ಥೆಯಾಗಿ 2012ರಲ್ಲಿ ಆರಂಭಿಸಿರುವ ಸಿ.ಎಲ್.ಇ. ಸಂಸ್ಥೆಯ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯವು ಅವರ ಕನಸಿನ ಆಶೋತ್ತರಗಳ ದ್ಯೋತಕವಾಗಿ ಬೆಳೆದು ನಿಂತಿದೆ. ಶ್ರೀಯುತರು ಚಿಕ್ಕೋಡಿಯ ಡಾ.ಪ್ರಭಾಕರ ಕೋರೆ ನಗರದಲ್ಲಿ ಜನವರಿ 2014ರಲ್ಲಿ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಟ್ಟುಹಾಕಿದ್ದಾರೆ. ಅವರ ಸಮರ್ಥ, ದಕ್ಷ ಹಾಗೂ ಚಾಣಾಕ್ಷ ಆರ್ಥಿಕ ಯೋಚನೆ, ಯೋಜನೆಗಳ ಫಲವಾಗಿ ಕಳೆದ ಒಂದೆರಡು ತಿಂಗಳಲ್ಲಿ ಈ ಸಂಸ್ಥೆಯು ನಿಪ್ಪಾಣಿ, ಸವದತ್ತಿ, ಬೈಲಹೊಂಗಲ ಹಾಗೂ ರಾಮದುರ್ಗದಲ್ಲಿ ತನ್ನ ಶಾಖೆಗಳನ್ನು ಆರಂಭಿಸುವಂತಾಗಿದೆ.

# ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಿರಿಯ ಅಧಿಕಾರಿಗಳಿಗೆ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ತರಬೇತಿ



ಉದ್ಘಾಟನೆ



ಗಣ್ಯರೊಂದಿಗೆ ಶಿಬಿರಾರ್ಥಿಗಳು

**ಮೈಸೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ದಿನಾಂಕ 21 ರಿಂದ 27 ಆಗಸ್ಟ್ 2026 ರವರೆಗೆ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಕಾರ್ಯಕ್ರಮವನ್ನು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಮೈಸೂರುನಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 21.08.2026 ರಂದು ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಮಹಾ ಮೇದಾನಂದ ಸ್ವಾಮಿಜೀ ಮಾನ್ಯ ಸಂಚಾಲಕರು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಮೈಸೂರು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿ ಪರ ನಿರ್ದೇಶಕರಾದ ಶ್ರೀ ಮಹಾದೇವ ಸ್ವಾಮಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಹೆಚ್ ವಿ ರಾಜೀವ್. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಉಪಸ್ಥಿತರಿದ್ದರು.

**ಕುಶಲತೆಯಿಂದ ಕೆಲಸ ನಿರ್ವಹಿಸುವುದು : ಶ್ರೀ ಮಹಾ ಮೇದಾನಂದ ಸ್ವಾಮಿಜೀ ಮಾನ್ಯ ಸಂಚಾಲಕರು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಮೈಸೂರು,** ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಇವರು ಸಿಬ್ಬಂದಿಗಳು ತಮ್ಮ ಕೆಲಸದಲ್ಲಿ ಕೌಶಲ್ಯತೆಯನ್ನು ಹೆಚ್ಚಿಸಿಕೊಂಡು ಶಿಸ್ತು ಪ್ರಾಮಾಣಿಕತೆಯಿಂದ ತಮ್ಮ ಕೆಲಸವನ್ನು ನಿರ್ವಹಿಸಬೇಕು. ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿಯವರು 7 ದಿನಗಳ ಉತ್ತಮವಾದ ತರಬೇತಿಯನ್ನು ಹಮ್ಮಿಕೊಂಡಿದ್ದಾರೆ. ಇದರ ಸದುಪಯೋಗ ಪಡೆದುಕೊಳಬೇಕು ಸಂಸ್ಥೆಯ ಬೆಳವಣಿಗೆಗೆ ಸಿಬ್ಬಂದಿಗಳ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಶ್ರದ್ಧೆಯಿಂದ ತರಬೇತಿಯನ್ನು ಪಡೆದುಕೊಂಡು ತಮ್ಮ ಸಂಸ್ಥೆಗೆ ಹಾಗೂ ಗ್ರಾಹಕರಿಗೆ ಉತ್ತುಮವಾದ ಸೇವೆಯನ್ನು ನೀಡಬೇಕು ಎಂದು ಹೇಳಿದ್ದರು.

**ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಿ : ಶ್ರೀ ಹೆಚ್ ವಿ ರಾಜೀವ್. ಮಾನ್ಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರು & ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.** ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಇವರು ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ತಮ್ಮಗೆ ಅವಕಾಶ ಸಿಕ್ಕಿದೆ ಇದರಲ್ಲಿ ವಿವಿಧ ವಿಷಯಗಳು ಕೋರ್ಸ್ ವಿಭಿನ್ನ ಅಧ್ಯಯನ ಸಾಮಗ್ರಿಗಳನ್ನು ಒಳಗೊಂಡಿರುವ ವಿಶಿಷ್ಟ ವೈಶಿಷ್ಟಗಳನ್ನು ಹೊಂದಿದೆ ಇದನ್ನು ಸದುಪಯೋಗಪಡಿಸಿಕೊಳಬೇಕು. ಉತ್ತಮವಾದ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಪ್ರತಿಯೊಬ್ಬರೂ ಸೈಬರ್ ಕ್ರೈಂಗಳ ಬಗ್ಗೆ ಜಾಗೃತಿಯನ್ನು ವಹಿಸಬೇಕು ಜನರಿಗೆ ಉತ್ತಮವಾದ ಸೇವೆಯನ್ನು ನೀಡಬೇಕು ಎಂದು ತಿಳಿಸಿದರು.

**ಸಂಸ್ಥೆ ಬೆಳವಣಿಗೆಗೆ ಸಿಬ್ಬಂದಿಗಳ ಪಾತ್ರ ಮಹತ್ವದು: ಶ್ರೀ ಮಹಾದೇವ ಸ್ವಾಮಿ ಮಾನ್ಯ ವೃತ್ತಿ ಪರ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಇವರು ತರಬೇತಿ ಕಾರ್ಯಕ್ರಮವು ಎಲ್ಲರಿಗೂ ಸಮಗ್ರ ಜ್ಞಾನ ಗ್ರಹಿಸುವ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಪ್ರತಿನಿಧಿಗಳು ಉತ್ತಮವಾದ ಜ್ಞಾನವನ್ನು ಪಡೆದುಕೊಂಡು ಸಂಸ್ಥೆಯ ಬೆಳವಣಿಗೆಗೆ ಪಾತ್ರರಾಗಬೇಕು ಗ್ರಾಹಕರು ದೇವರು, ನಾವು ಅವರಿಗೆ ಉತ್ತಮ ಸೇವೆಗಳನ್ನು ಒದಗಿಸಬೇಕು. ನಾವು ಬದ್ಧತೆ ಮತ್ತು ಸಾಮಾನ್ಯ ಪ್ರಜ್ಞೆಯೊಂದಿಗೆ ಕೆಲಸ ಮಾಡಬೇಕು. ಪ್ರತಿಯೊಬ್ಬ ಉದ್ಯೋಗಿಗೆ ಕೆಲಸದ ಬಗ್ಗೆ ಬದ್ಧತೆ ಮತ್ತು ಸಾಮಾನ್ಯ ಜ್ಞಾನದ ಅಗತ್ಯವಿದೆ ಎಂದು ತಿಳಿಸಿದರು.

**ತರಬೇತಿಯಿಂದ ಕೌಶಲ್ಯ ಅಭಿವೃದ್ಧಿ ಹೊಂದಬೇಕು: ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.** ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮಾತನಾಡಿದ ಇವರು ಸಂಯುಕ್ತ ಸಹಕಾರಿಯ ವಿವಿಧ ತರಬೇತಿ ಕಾರ್ಯಕ್ರಮಗಳ ಆಯೋಜಿಸುತ್ತಾ ಬಂದಿದೆ. ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳಿಗಾಗಿ ಸಿಬ್ಬಂದಿಯವರಿಗಾಗಿ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನ ಕಾರ್ಯಕ್ರಮವನ್ನು ಬ್ಯಾಂಕಿಂಗ್ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿ ವಿಷಯಗಳನ್ನು ಅಳವಡಿಸಲಾಗಿದೆ. ಈ ತರಬೇತಿಯಿಂದ ಸಿಬ್ಬಂದಿಗಳು ಕೌಶಲ್ಯ




ಸಮಾರೋಪ ಕಾರ್ಯಕ್ರಮ



ಪ್ರಮಾಣಪತ್ರ ವಿತರಣೆ

ಅಭಿವೃದ್ಧಿಯನ್ನು ಹೊಂದಬೇಕು ಉತ್ತಮವಾದ ಸೇವೆಯನ್ನು ನೀಡಬೇಕು ಎಂದು ತಿಳಿಸಿದರು.

ಈ ತರಬೇತಿ ಕಾರ್ಯಕ್ರಮದ ಸ್ವಾಗತವನ್ನು ಶ್ರೀಗುರುಪ್ರಸಾದ್ ಬಂಗೇರ, ಪ್ರಾತೀಯ ವ್ಯವಸ್ಥಾಪಕರು ಕ.ರಾ.ಸೌ.ಸಂ.ಸ.ನಿ., ಮೈಸೂರು ಇವರು ಕೋರಿದರು. ಪ್ರಾರ್ಥನೆಯನ್ನು ಶ್ರೀಮತಿ ಪ್ರಿಯಾ ಕೌತುಬಾ ಸೌಹಾರ್ದ ಸಹಕಾರಿಯ ಮೈಸೂರಿನ ಸಿಬ್ಬಂದಿ, ನಿರೂಪಣೆಯನ್ನು ಬಾಬು ಪಠಾಣ್ ತರಬೇತಿ ಅಧಿಕಾರಿ ಹಾಗೂ ವಂದನಾರ್ಪಣೆಯನ್ನು ಶ್ರೀಮತಿ ಶ್ರೀದೇವಿಯವರು ಹೊಂದಿಸಿದ್ದರು.

ಈ ತರಬೇತಿ ಕಾರ್ಯಕ್ರಮದಲ್ಲಿ 04 ಬ್ಯಾಂಕುಗಳಿಂದ 28 ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಸೇರಿದಂತೆ ಒಟ್ಟು 35 ಜನ ಭಾಗವಹಿಸಿದ್ದರು.

**ಸಮಾರೋಪ ಕಾರ್ಯಕ್ರಮ :**

ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 27.08.2026ರಂದು ಏರ್ಪಡಿಸಲಾಗಿತ್ತು. ಶಿಬಿರಾರ್ಥಿಗಳೇ ಈ ಸಮಾರೋಪ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದರು.

**ಸಹಕಾರಿ ಸಿಬ್ಬಂದಿಯವರ ಕೌಶಲ್ಯವನ್ನು ವೃದ್ಧಿಸಿಕೊಳ್ಳಲು ಸದಾವಕಾಶ : ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ,** ಇವರು ವಹಿಸಿ ಮಾತನಾಡಿದ ಇವರು ಸಂಯುಕ್ತ ಸಹಕಾರಿಯು ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಸೌಹಾರ್ದ ಪಟ್ಟಣ ಸಹಕಾರಿಗಳ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನ ತರಬೇತಿ ಕಾರ್ಯಕ್ರಮವಾಗಿದೆ. ತಾವು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡಿದ್ದಿರಾ. ಉತ್ತಮವಾಗಿ ಮತ್ತು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಸಿಬ್ಬಂದಿಗಳಲ್ಲಿ ಸೇವಾ ಮನೋಭಾವನೆ ಬೆಳೆಸಿಕೋಳಬೇಕು: ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ನಾರಾಯಣರಾವ್ ಎಸ್ ಆರ್ ಮಾನ್ಯ ಅಧ್ಯಕ್ಷರು ಮೈಸೂರು ಮಂಡ್ಯ ಮತ್ತು ಕೊಡಗು ಜಿಲ್ಲಾ ಒಕ್ಕೂಟ ನಿ, ಮೈಸೂರು. ಮಾತನಾಡಿದ ಇವರು ಸಿಬ್ಬಂದಿಗಳು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು. ಸಿಬ್ಬಂದಿಗಳು ಸೇವಾ ಮನೋಭಾವನೆ ಬೆಳೆಸಿಕೋಳಬೇಕು ಸಂಸ್ಥೆಯ ನೀತಿ ನೇಮಗಳಿಗೆ ಬದ್ಧರಾಗಿ ಕೆಲಸ ಮಾಡಬೇಕು ಎಂದು ತಿಳಿಸಿದ್ದರು.

ಈ ಕಾರ್ಯಕ್ರಮದಲ್ಲಿ ಶ್ರೀಗುರುಪ್ರಸಾದ್ ಬಂಗೇರ, ಪ್ರಾತೀಯ ವ್ಯವಸ್ಥಾಪಕರು ಕ.ರಾ.ಸೌ.ಸಂ.ಸ.ನಿ., ಮೈಸೂರು ಉಪಸ್ಥಿರದ್ದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಸುರೇಶ ಆರ್.ಎಸ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಮೈಸೂರು ಇವರು ಸ್ವಾಗತ ಕೊರಿದರು.

**ಶಿಬಿರಾರ್ಥಿಗಳ ಆಯ್ದ ಅನಿಸಿಕೆಗಳು :**

ಕಾರ್ಯಕ್ರಮವನ್ನು ಅತ್ಯಂತ ಶಿಸ್ತಿನಿಂದ, ವ್ಯವಸ್ಥಿತವಾಗಿ ನಡೆಸಲಾಗಿದೆ. ನಮ್ಮ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ. ಈ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನ ತರಬೇತಿ ಕಾರ್ಯಕ್ರಮವಾಗಿದೆ. ಬಹಳ ಒಳ್ಳೆಯ ಶಿಬಿರ, ಉತ್ತಮ ವಿಷಯಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಉತ್ತಮವಾಗಿತ್ತು ಎಂಬುದಾಗಿ ತಿಳಿಸಿದ್ದಾರೆ.

ನೆನಪಿನ ಕಾಣಿಕೆ ಹಾಗೂ ಪ್ರಮಾಣ ಪತ್ರಗಳ ವಿತರಣೆ : ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಎಲ್ಲಾ ಶಿಬಿರಾರ್ಥಿಗಳಿಗೆ ನೆನಪಿನ ಕಾಣಿಕೆ ಮತ್ತು ಪ್ರಮಾಣ ಪತ್ರಗಳನ್ನು ನೀಡಲಾಯಿತು.

**ವಿವಿಧ ಕಾರ್ಯಕ್ರಮಗಳಲ್ಲಿನ ಬಹುಮಾನ ಪಡೆದ ಶಿಬಿರಾರ್ಥಿಗಳು**

1. ಉತ್ತಮವಾದ ಪ್ರಾರ್ಥನೆ – ಕುಮಾರಿ ಸಂಜನಾ
2. ಉತ್ತಮವಾದ ಸುವಿಚಾರ – ಶ್ರೀ ಶ್ರೀನಿಧಿ ಪುರಾಣಿಕ
3. ಉತ್ತಮವಾದ ಮಿಲಿ – ಶ್ರೀ ಮಧುಕಿರಣ್
4. ತಕ್ಷಣ ಮಿಲಿ – ಶ್ರೀ ಶರಣಬಸವ ದಂಡಿನ್
5. ಉತ್ತಮ ವರದಿ – ಅರ್ಜುನ್ ತಂಡ
6. ಉತ್ತಮ ಶಿಬಿರಾರ್ಥಿ – ಮಹಿಳಾ ವಿಭಾಗ : ಶ್ರೀಮತಿ ನಾಗಮ್ಮ
   – ಪುರುಷ ವಿಭಾಗ : ಶ್ರೀ ಪವನ್ ಕುಮಾರ್

**ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಶಿಬಿರಾರ್ಥಿಗಳು :**

1) ಪ್ರಥಮ : ಶ್ರೀ ಕಿರಣ್ ವಿರಭದ್ರಪ್ಪ ಸೊರಬದೆ
2) ದ್ವಿತೀಯ : ಶ್ರೀ ಮಂಜುನಾಥ್ ಜಿ ಆರ್ ಮತ್ತು ವಿಜಯ ಹೆಚ್ ಹಿರೇಮಠ
3) ತೃತೀಯ : ಶ್ರೀ ನವಿನ್ ಎಂ ಮತ್ತು ಅಮರೇಶ
4) ಸಮಾಧಾನಕರ : ಶ್ರೀ ರಮೇಶ ಎಂ ಚಿಮ್ಮಲಗಿ

ಶಿಬಿರಾರ್ಥಿಗಳು ತಮ್ಮ ತಂಡದಿಂದ ಕಾಣಿಕೆಯನ್ನು ಸಂಯುಕ್ತ ಸಹಕಾರಿಗೆ ನೀಡಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಭುವನ್ ರಾವ್ ಸಲ್ಲಿಸಿದರು.

# ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳ ವರದಿಗಳು



**ಕೋಲಾರ** : ದಿನಾಂಕ 04.08.2026ರಂದು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಕೋಲಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಹರ್ಷಜಿತ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನುಡಿದರು. ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ನಡೆಸಿಕೊಟ್ಟರು. ಈ ಸಂಪರ್ಕ ಸಭೆಯಲ್ಲಿ 12 ಸೌಹಾರ್ದ ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿಕ್ಕಬಳ್ಳಾಪುರ** : ದಿನಾಂಕ 04.08.2026ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನುಡಿದರು. ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ನಡೆಸಿಕೊಟ್ಟರು. ಈ ಸಂಪರ್ಕ ಸಭೆಯಲ್ಲಿ 39 ಸೌಹಾರ್ದ ಸಹಕಾರಿಗಳಿಂದ 58 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಳಗಾವಿ** : ದಿನಾಂಕ 10.08.2026 ರಂದು ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಭಾಗ, ನಿಪ್ಪಾಣಿ, ಮೂಡಲಗಿ, ಕಾಗವಾಡ ಹುಕ್ಕೇರಿ ತಾಲೂಕಿನ ಯಮಕನಮರಡಿ ಭಾಗದ ಸಹಕಾರಿಗಳನ್ನು ಹೊರತು ಪಡಿಸಿ ಉಳಿದ ಭಾಗದ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಶ್ರೀ ಎಮ್.ಕೆ. ಕವಟಗಿಮಠ ಕನ್ವೇಶನ ಹಾಲ್, ಹಾಲಟ್ಟಿ, ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ ಮತ್ತು ಶ್ರೀ ಸಂಜಯ ಬ. ಪಾಟೀಲ ಇವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಉದ್ಘಾಟನೆಯ ನಂತರ ಮೊದಲನೆಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಸಂಪರ್ಕ ಸಭೆಯನ್ನು

ಉದ್ದೇಶಿಸಿ ಮಾತನಾಡಿ ನಂತರ ಸೌಹಾರ್ದ ಸಹಕಾರಿಗಳೊಂದಿಗೆ ಸಮಾಲೋಚನೆಯನ್ನು ನಡೆಸಿದರು. ಎರಡನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯಿಂದ ಹೊರಡಿಸಿದ ಸುತ್ತೋಲೆಗಳ ಕುರಿತು ಟಾಸ್ಕ್ ಫೋರ್ಸ್ ಮುಖ್ಯಸ್ಥರಾದ ಶ್ರೀ ಗಂಗಾರಾಮ ಕೋಳಾಪ್ಟೆ ಇವರು ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದ ಸ್ವಾಗತವನ್ನು ಶ್ರೀ ವೃಷಭನಾಥ ಪರಪ್ಪನವರ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಡೆಸಿಕೊಟ್ಟರು. ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ನಿರೂಪಿಸಿ, ವಂದಿಸಿದರು. ಸಭೆಯಲ್ಲಿ ಒಟ್ಟು 356 ಸೌಹಾರ್ದ ಸಹಕಾರಿಗಳಿಂದ 1262 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಳಗಾವಿ:** ದಿನಾಂಕ 11.08.2026 ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಚೆನ್ನಮ್ಮನ ಕಿತ್ತೂರು, ಸವದತ್ತಿ, ಬೈಲಹೊಂಗಲ, ಯರಗಟ್ಟಿ, ಗೋಕಾಕ, ರಾಮದುರ್ಗ ತಾಲ್ಲೂಕು ಮತ್ತು ಹುಕ್ಕೇರಿ ತಾಲೂಕಿನ ಯಮಕನಮರಡಿ ಭಾಗದ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಕೆ.ಪಿ.ಟಿ.ಸಿ.ಎಲ್ ಸಭಾಭವನ ಶಿವಬಸವ ನಗರ ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರುಗಳಾದ ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ, ಶ್ರೀ ನಾಗರಾಜ ಆರ್ ದೇಶಪಾಂಡೆ, ಶ್ರೀ ಕೆ ಶಿವಲಿಂಗಪ್ಪ, ಶ್ರೀ ಮೋಹನದಾಸ ಜೆ ನಾಯಕ ಮತ್ತು ಶ್ರೀ ಸಂಜಯ ಬ. ಪಾಟೀಲ ಇವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ನಡೆಸಿಕೊಟ್ಟರು.

ಕಾರ್ಯಕ್ರಮದ ಉದ್ಘಾಟನೆಯ ನಂತರ ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಸಂಪರ್ಕ ಸಭೆಯನ್ನು ಉದ್ದೇಶಿಸಿ ಮಾತನಾಡಿ ನಂತರ ಸೌಹಾರ್ದ ಸಹಕಾರಿಗಳೊಂದಿಗೆ ಸಮಾಲೋಚನೆಯನ್ನು ನಡೆಸಿದರು. ಎರಡನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯಿಂದ ಹೊರಡಿಸಿದ ಸುತ್ತೋಲೆಗಳ ಕುರಿತು ಶ್ರೀ ರಾಚಯ್ಯ ಹಿರೇಮಠ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಬೆಳಗಾವಿ ಇವರು ಮಾಹಿತಿ ನೀಡಿದರು.ಕಾರ್ಯಕ್ರಮದ ಸ್ವಾಗತವನ್ನು ಶ್ರೀ ವೃಷಭನಾಥ ಪರಪ್ಪನವರ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಡೆಸಿಕೊಟ್ಟರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ನಿರೂಪಿಸಿದರು ಹಾಗೂ ಶ್ರೀ ವಿನೋದ ಮರಾಠ ಇವರು ವಂದಿಸಿದರು. ಸಭೆಯಲ್ಲಿ ಒಟ್ಟು 320 ಸೌಹಾರ್ದ ಸಹಕಾರಿಗಳಿಂದ 1052 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬಳ್ಳಾರಿ :** ದಿನಾಂಕ 06.08.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಹಯೋಗದಲ್ಲಿ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಹಾಗೂ ಸಿಬ್ಬಂದಿಯವರಿಗೆ ಉನ್ನತ ಮಟ್ಟದ ತರಬೇತಿ ಕಾರ್ಯಾಗಾರವನ್ನು ಚಿಕ್ಕಮಗಳೂರಿನಲ್ಲಿರುವ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜೆ ಹನುಮಂತಯ್ಯ ವಹಿಸಿಕೊಂಡು ಮಾತನಾಡಿ, ರಾಜ್ಯದಲ್ಲಿಯೆ ಪ್ರಥಮವಾಗಿ ಬಳ್ಳಾರಿ ಜಿಲ್ಲೆಯಿಂದ ಹೊರಗಡೆ ಜಿಲ್ಲೆಯಲ್ಲಿ ತರಬೇತಿಯನ್ನು ಆಯೋಜನೆ ಮಾಡಲು ಅನುಕೂಲ ಮಾಡಿಕೊಟ್ಟಿರುವ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳು ತಿಳಿಸಿದರು. ಉದ್ಘಾಟಕರಾಗಿ ಶ್ರೀ ಸತ್ಯನಾರಾಯಣ, ನಿರ್ದೇಶಕರು ಮೇಘ ಸೌಹಾರ್ದ ಸಹಕಾರಿ, ಮುಖ್ಯ ಅತಿಥಿಗಳಾಗಿ, ಶ್ರೀ ಚಿಂತಕುಂಟೆ ಗಾದಿಲಿಂಗನ ಗೌಡ್ರು, ಶ್ರೀ ಪ್ರಭುಗೌಡ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗುರುಸ್ವಾಮಿ, ಶ್ರೀ ಶಶಿಧರ ಎಲೆ, ಶ್ರೀ ಮಹೇಶ್ ಗೌಡರು, ನರಸಿಂಹ ಮೂರ್ತಿ, ಹಾಸ್ಯ ಕಲಾವಿದರು, ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯನ್ನು ಶ್ರೀ ವೀರಶೆಟ್ಟಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ನುಡಿದರು. ಶ್ರೀ ಅನಿಲಕುಮಾರ್ ಸ್ವಾಗತಿಸಿದರು, ಶ್ರೀ ರಾಘವೇಂದ್ರ ನಿರೂಪಿಸಿದರು. ಸದರಿ ಕಾರ್ಯಕ್ರಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ್ ಜಿ ರವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ 45 ಜನ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದರು. ಪ್ರಥಮ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಅಂಶಗಳು ಕುರಿತು ಶ್ರೀ ಗುರುಸ್ವಾಮಿ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ದ್ವಿತೀಯ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ಯೋಜನೆ ಕುರಿತು ಶ್ರೀ ಶಶಿಧರ ಎಲೆ ಇವರು ಉಪನ್ಯಾಸ ನೀಡಿದರು.



**ಬೀದರ :** ದಿನಾಂಕ 14.08.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಕಲಬುರಗಿ ಪ್ರಾಂತ ಬೀದರ ಜಿಲ್ಲಾ ಸಂಪರ್ಕ ಕಛೇರಿ ವತಿಯಿಂದ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಸಾಮರ್ಥ್ಯ ತರಬೇತಿ ಕೇಂದ್ರದಲ್ಲಿ ವಿಷಯಾಧಾರಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ಸಂಘ ಸಂಸ್ಥೆಗಳು ಬೆಳೆಯಬೇಕಾದರೆ ಶಿಸ್ತು ಅಗತ್ಯ, ಎಲ್ಲೆಲ್ಲಿ ಶಿಸ್ತು ಇದೆಯೋ ಆ ಸಹಕಾರಿ ಸಂಸ್ಥೆಗಳು ಬೆಳೆಯುತ್ತವೆ ಮತ್ತು ಸಹಕಾರಿಯಲ್ಲಿ ನಡೆಯುವ ಎಲ್ಲಾ ಕಾರ್ಯಚಟುವಟಿಕೆಗಳಿಗೆ ಮುಖ್ಯಕಾರ್ಯನಿರ್ವಾಹಕರೇ ಜವಾಬ್ದಾರರು, ಮತ್ತು ಸಹಕಾರಿಗಳು ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿ ಸಲ್ಲಿಸಲೇಬೇಕು, ಹಾಗೆಯೇ ಸಹಕಾರಿಗಳು ತಮ್ಮ ಸದಸ್ಯರ ಹಿತರಕ್ಷಣೆಯನ್ನು ಕಾಪಾಡಬೇಕು ಆಗ ಮಾತ್ರ ಸಹಕಾರಿ ಸಂಸ್ಥೆಗಳು ಎತ್ತರಕ್ಕೆ ಬೆಳೆಯುತ್ತವೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ರಾಜಶೇಖರ ನಾಗಮೂರ್ತಿ ಅವರು ವಹಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಂಜುಳಾ, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಸಹಕಾರ ಇಲಾಖೆ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರರವರು ನಡೆಸಿಕೊಟ್ಟರು. ಉಪನ್ಯಾಸಕರಾಗಿ ಶ್ರೀ ಬಿ. ಸುಬ್ರಹ್ಮಣ್ಯ ಪ್ರಭು, ಮಾನ್ಯ ನಿರ್ದೇಶಕರು, ಸಹಾರ್ದ ತರಬೇತಿ ಸಂಸ್ಥೆ, ನೌಬಾದ, ಬೀದರ ಇವರು ಆಡಳಿತ ಮಂಡಳಿ ಸದಸ್ಯರ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಉಪನ್ಯಾಸ ನೀಡಿದರು ಮತ್ತು ಸಹಕಾರಿ ಕ್ಷೇತ್ರ ಎಂದರೆ ಇನ್ನೊಂದು ರೀತಿಯ ಪ್ರಜಾಪ್ರಭುತ್ವ ಇದ್ದ ಹಾಗೇ, ಸದಸ್ಯರೇ ಸಹಕಾರಿಗಳ ನಿಜವಾದ ಮಾಲೀಕರು ಎಂದರು ಮತ್ತು ಅಮೂಲ್, ಕೆ.ಎಮ್.ಎಫ್ ಗಳ ರೀತಿಯಲ್ಲಿ ಸಹಕಾರಿ ಕ್ಷೇತ್ರಗಳು ಅಭಿವೃದ್ಧಿ ಹೊಂದಬೇಕೆಂದರು ಮತ್ತು ಸಹಕಾರಿ ಸದಸ್ಯರ ಪ್ರಶ್ನೆಗಳಿಗೆ ಸೂಕ್ತ ಸಲಹೆಗಳನ್ನು ನೀಡಿದರು ಮತ್ತು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ರವರು ಸಂಯುಕ್ತ ಸಹಕಾರಿಯ ಸುತ್ತೋಲೆಗಳು ಹಾಗೂ ಸೌಹಾರ್ದ ಸಹಕಾರಿಯ ಶಾಸನಬದ್ಧ ಕರ್ತವ್ಯಗಳ ಬಗ್ಗೆ ಸಹಕಾರಿ ಸದಸ್ಯರಿಗೆ ಉಪನ್ಯಾಸ ನೀಡಿದರು. ಶ್ರೀ ಸುಕರಾಜ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಿರೂಪಿಸಿದರು. ಭವಾನಿ, ಕಿರಿಯ ಸಹಾಯಕಿ ಪ್ರಾರ್ಥನೆ ನಡೆಸಿಕೊಟ್ಟರು. 62 ಸೌಹಾರ್ದ ಸಹಕಾರಿಗಳಿಂದ 93 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.



**ಕೊಪ್ಪಳ :** ದಿನಾಂಕ. 01–08–2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಗಂಗಾವತಿ, ಕೊಪ್ಪಳ ಇವರ ಸಹಯೋಗದಲ್ಲಿ ಸಹಕಾರಿಗಳ ಜ್ಞಾನೋತ್ಸವ ಕಾರ್ಯಕ್ರಮವನ್ನು ಶ್ರೀ ಶಿವಶಾಂತವೀರ ಮಂಗಲ ಭವನ ಕೊಪ್ಪಳ ಇಲ್ಲಿ ಏರ್ಪಡಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ ವಹಿಸಿದರು ಈ ಕಾರ್ಯಕ್ರಮದಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಮಹಾಲಿಂಗಪ್ಪ ದೋಟಿಹಾಳ ನಿರ್ದೇಶಕರಾದ ಶ್ರೀ ಕುಮಾರಪ್ಪ ಸಿಂಗನಾಳ ಶ್ರೀ ಶಂಕರಗೌಡ ಹಿರೇಗೌಡ್ರ ಶ್ರೀ ಮುದ್ದಪ್ಪ ಬೇವಿನಹಳ್ಳಿ ಶ್ರೀ ಟಿ ಲೋಕೇಶಪ್ಪ ಶ್ರೀ ಬಸವರಾಜ ಪಡಿ ಶ್ರೀ ನಾಗಲಿಂಗಪ್ಪ ಪತ್ತಾರ ಶ್ರೀ ನೀಲನಗೌಡ ತಳವಗೇರಿ ಶ್ರೀ ಫಕ್ರುದ್ದೀನ್ ಸಾಬ್ ಸಬರದ ಶ್ರೀ ಬಸವರಾಜ ಗುಗ್ಗುಳಶೆಟ್ಟರ ಶ್ರೀ ನಾಗರಾಜ ನಾಗನೂರು ಶ್ರೀ ಗವಿಸಿದ್ದಯ್ಯ ಲಿಂಗಬಸಯ್ಯನಮಠ ಹಾಗೂ RKDCC ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ ಹಾಗೂ ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು. ಉದ್ಘಾಟನೆಯ ನಂತರ ಸಹಕಾರಿಗಳಿಗೆ ಲಿಖಿತ ಪರೀಕ್ಷೆ ಹಾಗೂ ಕ್ವಿಜ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಲಿಖಿತ ಪರೀಕ್ಷೆ ಹಾಗೂ ಕ್ವಿಜ್ ನಲ್ಲಿ 115 ಸಿಬ್ಬಂದಿಗಳು ಭಾಗವಹಿಸಿದರು.

**ವಿಶೇಷ ಸೂಚನೆ :** ಶ್ರೀ ಮಧುಕರ ಹೆಗಡೆಯವರ ಲೇಖನ ಸಹಕಾರಿ ಸಂಸ್ಥೆಗಳ ಹಣಕಾಸು ಆರೋಗ್ಯದ ಮೌಲ್ಯಮಾಪನದ ಪೂರ್ಣ ಪಾಠವನ್ನು "ಸಹಕಾರ ಜ್ಯೋತಿ" ಕಿರುಹೊತ್ತಿಗೆಯಲ್ಲಿ ಪ್ರಕಟಿಸಲಾಗಿದೆ ಹಾಗೂ ಸಂಯುಕ್ತ ಸಹಕಾರಿಯ ವೆಬ್‌ಸೈಟ್ ನಲ್ಲಿ ಓದಿಕೊಳ್ಳಬಹುದು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

**ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು–560055**

**www.souharda.coop, Ph: 080-23378375-80, Email:souharda@souharda.coop**

## ವಾರ್ಷಿಕ ವಂತಿಗೆ, ಶಿಕ್ಷಣ ನಿಧಿ, ಪ್ರತಿನಿಧಿ ಶುಲ್ಕ ಹಾಗೂ ಇತರೆ ಶುಲ್ಕಗಳ ಪಾವತಿಗೆ ಸಂಬಂಧಿಸಿದ ಸುತ್ತೋಲೆ (ಕ.ಸೌ.ಸ.ಕಾಯ್ದೆ ಕಲಂ 53(7)(ಹೆಚ್) ರಡಿಯ ಪ್ರಾವಧಾನದಂತೆ)

**ಪೀಠಿಕೆ ವಿವರ ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ನೋಡಬಹುದು**

**ಸಂಖ್ಯೆ:ಸಂಸ/ಹಕಾವಿ/ಶುಪಾ–01/2026–27** **ದಿನಾಂಕ 26.08.2026**

### ಸುತ್ತೋಲೆ

1. ವಾರ್ಷಿಕ ವಂತಿಗೆ (Annual Contribution – AF), ಶಿಕ್ಷಣ ನಿಧಿ (Education Fund – EF), ಪ್ರತಿನಿಧಿ ಶುಲ್ಕ (Delegate Fee) ಹಾಗೂ ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ ಇತರೆ ಯಾವುದೇ ಶುಲ್ಕಗಳನ್ನು Axis Bank Easy Pay System ಅಥವಾ ಸಂಬಂಧಿತ ಸೌಹಾರ್ದ ಸಹಕಾರಿಗೆ ನಿಗದಿಪಡಿಸಿರುವ Virtual Account Number ಮೂಲಕ ಮಾತ್ರ ಪಾವತಿಸಬೇಕು.

2. ವಾರ್ಷಿಕ ವಂತಿಗೆ, ಶಿಕ್ಷಣ ನಿಧಿ, ಪ್ರತಿನಿಧಿ ಶುಲ್ಕ ಅಥವಾ ಸಂಯುಕ್ತ ಸಹಕಾರಿಗೆ ಸಂಬಂಧಿಸಿದ ಯಾವುದೇ ಇತರೆ ಶುಲ್ಕಗಳನ್ನು ಸಂಯುಕ್ತ ಸಹಕಾರಿಯ ಯಾವುದೇ ಅಧಿಕಾರಿ, ಸಿಬ್ಬಂದಿ ಅಥವಾ ಇತರೆ ಯಾವುದೇ ವ್ಯಕ್ತಿಯ ವೈಯಕ್ತಿಕ ಬ್ಯಾಂಕ್ ಖಾತೆಗೆ ಯಾವುದೇ ಕಾರಣಕ್ಕೂ ಜಮಾ ಮಾಡಬಾರದು.

3. Easy Pay System ಅಥವಾ ಅಧಿಕೃತವಾಗಿ ನಿಗದಿಪಡಿಸಿರುವ Virtual Account Number ಹೊರತುಪಡಿಸಿ, ಯಾವುದೇ ವೈಯಕ್ತಿಕ ಬ್ಯಾಂಕ್ ಖಾತೆ ಅಥವಾ ಅನಧಿಕೃತ ಪಾವತಿ ವಿಧಾನದಿಂದ ಮಾಡಲಾದ ಪಾವತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾ–ರಿಯ ಪಾವತಿಯಾಗಿ ಪರಿಗಣಿಸಲಾಗುವುದಿಲ್ಲ.

4. ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ ಮೊತ್ತವನ್ನು ಅಧಿಕೃತ ಪಾವತಿ ವ್ಯವಸ್ಥೆಯ ಮೂಲಕವೇ ಪಾವತಿಸಬೇಕು. ಯಾವುದೇ ಅನಧಿಕೃತ ಖಾತೆಗೆ ಅಥವಾ ಯಾವುದೇ ಅನಧಿಕೃತ ವಿಧಾನದಲ್ಲಿ ಪಾವತಿಸಿ, ಆ ಪಾವತಿಯಿಂದ ಉಂಟಾಗುವ ಹಣಕಾಸಿನ ನಷ್ಟ, ಪಾವತಿ ಹೊಂದಾಣಿಕೆಯ ತೊಂದರೆ, ವಿವಾದ, ದುರುಪಯೋಗ ಅಥವಾ ಇತರೆ ಯಾವುದೇ ಪರಿಣಾಮಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಜವಾಬ್ದಾರಿಯಾಗಿರುವುದಿಲ್ಲ ಹಾಗೂ ಇದಕ್ಕೆ ಆಯಾ ವ್ಯಕ್ತಿ/ಸಂಸ್ಥೆಗಳೇ ಜವಾಬ್ದಾರಿಯಾಗಿರುತ್ತಾರೆ.

5. ಪಾವತಿ ಮಾಡುವ ಸಂದರ್ಭದಲ್ಲಿ Remarks/Payment Reference ಕಾಲಂನಲ್ಲಿ ಪಾವತಿಯ ಉದ್ದೇಶ ಹಾಗೂ ಸಂಬಂಧಿಸಿದ ಹಣ–ಕಾಸು/ಸಹಕಾರ ವರ್ಷದ ವಿವರಗಳನ್ನು ಕಡ್ಡಾಯವಾಗಿ ನಮೂದಿಸಬೇಕು. ಉದಾಹರಣೆಗೆ – AF – 2026-27, EF – 2025-26 ಇತ್ಯಾದಿಯಾಗಿ ಸ್ಪಷ್ಟವಾಗಿ ನಮೂದಿಸುವುದು.

6. ಪಾವತಿ ಪೂರ್ಣಗೊಂಡ ನಂತರ UTR Number/Transaction Reference Number ಅನ್ನು ಕಡ್ಡಾಯವಾಗಿ ದಾಖಲಿಸಿಕೊಂಡು, ಸದರಿ ವಿವರಗಳನ್ನು ಸಹಕಾರಿಯ ದಾಖಲೆಗಳಲ್ಲಿ ಸಮರ್ಪಕವಾಗಿ ನಮೂದಿಸಿ ಸಂರಕ್ಷಿಸಬೇಕು.

7. Easy Pay System ಹಾಗೂ Virtual Account ಮೂಲಕ ಪಾವತಿ ಮಾಡುವ ವಿಧಾನಕ್ಕೆ ಸಂಬಂಧಿಸಿದ ವಿವರವಾದ ಮಾರ್ಗಸೂಚಿ ಹಾಗೂ Demo Video ಸಂಯುಕ್ತ ಸಹಕಾರಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಸದಸ್ಯ ಸಹಕಾರಿಗಳು ಸದರಿ ಮಾರ್ಗಸೂಚಿಯನ್ನು ಅನುಸರಿಸಿ ಪಾವತಿಗಳನ್ನು ಕೈಗೊಳ್ಳಬೇಕು.

8. ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ AF, EF, Delegate Fee ಹಾಗೂ ಇತರೆ ಎಲ್ಲಾ ಶುಲ್ಕಗಳನ್ನು ನಿಗದಿತ ಕಾಲಮಿತಿಯೊಳಗಾಗಿ ಅಧಿಕೃತ ಪಾವತಿ ವ್ಯವಸ್ಥೆಯ ಮೂಲಕ ಪಾವತಿಸಿ, ಪಾವತಿ ವಿವರಗಳನ್ನು ತಮ್ಮ ದಾಖಲೆಗಳಲ್ಲಿ ಸಮರ್ಪಕವಾಗಿ ಸಂರಕ್ಷಿಸಬೇಕು.

9. ಯಾವುದೇ ಅಧಿಕಾರಿ, ಸಿಬ್ಬಂದಿ ಅಥವಾ ಇತರೆ ವ್ಯಕ್ತಿಯು ವೈಯಕ್ತಿಕ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುವಂತೆ ಸೂಚಿಸಿದಲ್ಲಿ, ಅಂತಹ ಸೂಚನೆಯನ್ನು ಅನುಸರಿಸದೆ, ಪಾವತಿಯನ್ನು ಕೇವಲ ಸಂಯುಕ್ತ ಸಹಕಾರಿಯಿಂದ ಅಧಿಕೃತವಾಗಿ ತಿಳಿಸಲಾದ Easy Pay System/ Virtual Account ಮೂಲಕವೇ ಮಾಡಬೇಕು.

10. ಮೇಲ್ಕಂಡ ಸೂಚನೆಗಳನ್ನು ಉಲಂಘಿಸಿ ಸಂಯುಕ್ತ ಸಹಕಾರಿಯ ಯಾವುದೇ ಸಿಬ್ಬಂದಿಯು ತನ್ನ ವೈಯಕ್ತಿಕ ಖಾತೆಗೆ ಹಣ ವರ್ಗಾವಣೆಮಾಡಿಸಿಕೊಂಡಲ್ಲಿ, ಅಂತಹ ಸಿಬ್ಬಂದಿಯು ಅಪರಾಧ/ಅವ್ಯವಹಾರ ನಡೆಸಿದ್ದಾನೆ ಎಂದು ಪರಿಗಣಿಸಿ, ಅಂತಹ ಸಿಬ್ಬಂದಿಯ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ಸಹಕರಿಸಿದ ವ್ಯಕ್ತಿಗಳ ವಿರುದ್ಧವೂ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು.

ಈ ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ 26.08.2026 ರಂದು ಹೊರಡಿಸಲಾಗಿದೆ.

Karnataka State Souharda Federal Cooperative Ltd. Reg. No. RSR / SOU / ACT / 136 / Regn 051 / 2001-02 dated 04-01-2002 Bangalore

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

## 31ನೇ ವಾರ್ಷಿಕ ಸಾಮಾನ್ಯ ಸಭೆ



**ಚಿತ್ರದುರ್ಗ** : ದಿನಾಂಕ 31.08.2026ರಂದು ವಾಸವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಚಳ್ಳಕೆರೆ, ಚಿತ್ರದುರ್ಗ ಸಹಕಾರಿಯ 31ನೇ ವಾರ್ಷಿಕ ಸಾಮಾನ್ಯ ಸಭೆಯು ಛೇಂಬರ್ ಆಫ್ ಕಾಮರ್ಸ್ ಕಲ್ಯಾಣ ಮಂಟಪ, ಚಳ್ಳಕೆರೆ ಇಲ್ಲಿ ಜರುಗಿತು. ಸಭೆಯ ಉದ್ಘಾಟನೆಯನ್ನು ಸಂಂ–ಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಚಿದಂಬರ ಶೆಟ್ಟಿ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿ ರವರು, ಸನ್ನಧು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ. ರವೀಂದ್ರನಾಥ್ ರವರು ಉಪಸ್ಥಿತರಿದ್ದರು. ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್ ರವರು ಭಾಗವಹಿಸಿದ್ದರು.

## ಉದ್ಘಾಟನೆ



**ಬೀದರ** : ದಿನಾಂಕ 13.07.2026 ರಂದು ಬೀದರ ಜಿಲ್ಲೆಯಲ್ಲಿ ಹೊಸದಾಗಿ ರಚನೆಯಾದ ಕಾಯಕ ಸಿರಿ ಸೇವಾ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ. ಹುಡಗಿ, ಇದರ ಉದ್ಘಾಟನಾ ಸಮಾರಂಭವನ್ನು ಶ್ರೀ ವಿರಕ್ತಮಠ ಹುಡಗಿ ತಾ: ಹುಮನಾಬಾದ ಇಲ್ಲಿ ಹಮ್ಮಿಕೋಳ್ಳಲಾಗಿತ್ತು ಇದರ ದಿವ್ಯ ಸಾನಿಧ್ಯವನ್ನು ಪರಮ ಪೂಜ್ಯ ಶ್ರೀ ಷ.ಬ್ರ ವಿರೂಪಾಕ್ಷ ಶಿವಾಚಾರ್ಯರು ಪೀಠಾಧಿಪತಿಗಳು ಹಿರೇಮಠ ಸಂಸ್ಥಾನ ಹುಡಗಿ ಇವರು ವಹಿಸಿದರು ಮತ್ತು ಪರಮ ಪೂಜ್ಯ ಶ್ರೀ ಮ.ನಿ.ಪ್ರ ಚೆನ್ನಮಲ್ಲ ಸ್ವಾಮಿಗಳು ಪೀಠಾಧಿಪತಿಗಳು ವಿರಕ್ತಮಠ ಸಂಸ್ಥಾನ ಹುಡಗಿ, ಇದರ ಉದ್ಘಾಟಕರಾಗಿ ಡಾ॥ ಸಿದ್ದಲಿಂಗ ಪಾಟೀಲ್ ಮಾನ್ಯ ಶಾಸಕರು ಹುಮ್ನಾಬಾದ್, ಮುಖ್ಯಅತಿಥಿಗಳಾಗಿ, ಶ್ರೀ ಸೋಮನಾಥ್ ಪಾಟೀಲ, ಮಾನ್ಯ ಜಿಲ್ಲಾಧ್ಯಕ್ಷರು, ಬಿಜೆಪಿ, ಬೀದರ, ಶ್ರೀ ಗುರುನಾಥ ಜ್ಯಾಂತಿಕರ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ. ಬೆಂಗಳೂರು. ಶ್ರೀಮತಿ ಶೈಲಜಾ ತಪಲಿ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ. ಬೆಂಗಳೂರು. ಬೆಂಗಳೂರು. ಶ್ರೀ ಕಂಟೆಪ್ಪಾ ದಾನಪ್ಪ ಉದ್ಯಮಿಗಳು ಹುಡಗಿ. ಶ್ರೀ ಸಂಜಯ ಕೋರಟಕರ ಮಾನ್ಯ ಪ್ರಾಂತೀಯ ಅಧಿಕಾರಿಗಳು, ಕಲಬುರಗಿ, ಇವರು ಅತಿಥಿಗಳಾಗಿ ಭಾಗವಹಿಸಿದರು.



# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ

80ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



**ಬೆಂಗಳೂರು:** ದಿನಾಂಕ 15.08.2026 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟಿಲ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 15.08.2026 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಮಾನ್ಯ ಶ್ರೀ ಲಕ್ಷ್ಮಣ ಪವಾರ್ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಹಕಾರಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ :** ದಿನಾಂಕ 15.08.2026 ರಂದು ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲೀ ಅವರು ನೆರವೇ–ರಿಸಿದರು. ಈ ಸಂದರ್ಭದಲ್ಲಿ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ್ ಹಾಗೂ ಸ್ಥಳೀಯ ಸಹಕಾರಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ 15.08.2026 ರಂದು ಮೈಸೂರು ಪ್ರಾಂತೀಯ ಕಛೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಶ್ರೀ ಮಹದೇವಸ್ವಾಮಿ, ಮಾನ್ಯ ವೃತ್ತಿಪರ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಇವರು ನೆರವೇರಿಸಿದರು. ಪೂಜಾ ಕಾರ್ಯಕ್ರಮವನ್ನು ಶ್ರೀ ಎಸ್.ಆರ್. ನಾರಾಯಣ ರಾವ್, ಮಾನ್ಯ ಅಧ್ಯಕ್ಷರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ. ಮೈಸೂರು. ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಹಕಾರಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೀದರ :** ದಿನಾಂಕ.15.08.2026ರಂದು ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿ–ಕರ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಆಡಳಿತ ಮಂಡಳಿಯ ಸದಸ್ಯರು, ಸ್ಥಳೀಯ ಸಹಕಾರಿಗಳ ಅಧ್ಯಕ್ಷರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು..



**ಶಿವಮೊಗ್ಗ** : ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ದಲ್ಲಿ 80ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಎ ಆರ್ ಧ್ವಜಾರೋಹಣ ಮಾಡುವ ಮೂಲಕ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ್ ಜಿ ಹೆಚ್ ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಉದ್ಘಾಟನೆ



**ತುಮಕೂರು** : ದಿನಾಂಕ 02.08.2026ರಂದು ಶ್ರೀ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ಹೋಟೆಲ್ ಮತ್ತು ಉಪಹಾರ ಮಂದಿರಗಳ ಸಂಘ (ರಿ), ತುಮಕೂರು ಇದರ 80ನೇ ವರ್ಷದ ಅಮೃತ ಮಹೋತ್ಸವ ಹಾಗೂ ತುಮಕೂರು ಹೋಟೆಲ್ ಮಾಲೀಕರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಇದರ 50ನೇ ವರ್ಷದ ಸುವರ್ಣ ಮಹೋತ್ಸವ ಮತ್ತು ಸನ್ಮಾನ ಸಮಾರಂಭ ಕಾರ್ಯಕ್ರಮವು ತುಮಕೂರಿನ ಮಂಜುನಾಥ ಕಲ್ಯಾಣ ಮಂಟಪದಲ್ಲಿ ಜರುಗಿತು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು. ಹೋಟೆಲ್ ಮತ್ತು ಉಪಹಾರ ಮಂದಿರಗಳ ಸಂಘದ ಅಧ್ಯಕ್ಷರಾದ ಶ್ರೀ ವಾಸುದೇವ ಶೆಟ್ಟಿ ಹಾಗೂ ಹೋಟೇಲ್ ಮಾಲೀಕರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಸುರೇಶ್ ಹೊಳ್ಳ ರವರುಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾ ನಿರ್ದೇಶಕರು ಸನ್ಮಾನ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.




**ಧಾರವಾಡ** : ದಿನಾಂಕ 21.08.2026 ರಂದು ಗೋದಾವರಿ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ. ಹುಬ್ಬಳ್ಳಿ ಶಾಖೆಯ ಉದ್ಘಾಟನೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ರವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಇತರೆ ಗಣ್ಯರು ಹಾಗೂ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ** : ದಿನಾಂಕ 08.08.2026 ರಂದು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇದರ ವತಿಯಿಂದ ಮಂಡ್ಯ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ ಕ್ರೀಡಾ ಕಾರ್ಯಕ್ರಮ ಹಾಗೂ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಾಮಾನ್ಯ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಹೆಚ್ ವಿ ರಾಜೀವ್, ಮಾನ್ಯ ಶಿಕ್ಷಣ ಸಲಹಾ ಸಮಿತಿ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಗುರುರಾಜ್ ಬಿ ಟಿ ಮಾನ್ಯ ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸಿ ವಿಜೇತರಾದ ತಂಡಗಳಿಗೆ ಬಹುಮಾನವನ್ನು ವಿತರಣೆಯನ್ನು ಗಣ್ಯರು ಮಾಡಿದರು.

ಈ ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಯ ಸದಸ್ಯರುಗಳು, ಪದಾಧಿಕಾರಿಗಳು, ಸಿಬ್ಬಂದಿ ವರ್ಗದವರು, ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಮಂಡ್ಯ ಜಿಲ್ಲೆ ಇವರುಗಳು ಉಪಸ್ಥಿತರಿದ್ದರು.

# ವಾರ್ಷಿಕ ಸಾಮಾನ್ಯ ಸಭೆ



**ದಾವಣಗೆರೆ :** ದಿನಾಂಕ 15.08.2026ರಂದು ದಿ ಇಂಡಿಯನ್ ಸೌಹಾರ್ದ ಕೋ–ಆಪರೇಟಿವ್ ಸಹಕಾರಿ ನಿ, ಹರಿಹರ ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ನಂತರ ಮಾನ್ಯ ನಿರ್ದೇಶಕರನ್ನು ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ವೈ.ಎಸ್ ರವರು ಉಪಸ್ಥಿತರಿದ್ದರು.




**ಬೆಂಗಳೂರು :** ಉದಯ ಸೌಹಾರ್ದ ಸಹಕಾರಿ ಸಂಘ ನಿಯಮಿತದ 2025–26ನೇ ಸಾಲಿನ 31ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ 02–08–2026ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡುರಾವ್ ಬಿ.ಎಸ್. ರವರ ಅಧ್ಯಕ್ಷತೆಯಲ್ಲಿ, ಶ್ರೀ ಗುರು ನರಸಿಂಹ ಕಲ್ಯಾಣ ಮಂದಿರ, ಬುಲ್ ಟೆಂಪಲ್ ರಸ್ತೆ, ರಾಮಕೃಷ್ಣ ಆಶ್ರಮದ ಎದುರು, ಬೆಂಗಳೂರು, ಇಲ್ಲಿ ನಡೆಯಿತು. ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ನಿವ್ವಳ ಲಾಭ ರೂ. 1,63,97,322/– ಗಳಿಸಿದ್ದು, ಸದಸ್ಯರಿಗೆ ಶೇ.13ರಷ್ಟು ಡಿವಿಡೆಂಡ್ ಘೋಷಿಸಲಾಗಿದೆ. ಈ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಪುಸ್ತಕ ಮನೆ ಖ್ಯಾತಿಯ ಪದ್ಮಶ್ರೀ ಪುರಸ್ಕೃತ ಶ್ರೀಯುತ ಅಂಕೇಗೌಡ, ಸಾನಾಥ್ಯ ಫೌಂಡೇಶನ್‌ನ ಸಂಸ್ಥಾಪಕರಾದ ಶ್ರೀಯುತ ಅಜಯ್ ನಮ್ಮಣಿಪ್ಪುರತ್ತು ಹಾಗೂ ಖೋ–ಖೋ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿ ಕುಮಾರಿ ಚೈತ್ರ ಬಿ. ಅವರನ್ನು ಆಹ್ವಾನಿಸಿ ಸನ್ಮಾನಿಸಲಾಯಿತು. ಹಾಗೆಯೇ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ಎ.ಆರ್. ಪ್ರಸನ್ನಕುಮಾರ್ ಅವರು ಸಹ ಆಗಮಿಸಿ, ಗೌರವವನ್ನು ಸ್ವೀಕರಿಸಿದರು.

ಈ ಸುಸಂದರ್ಭದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅತಿಥಿ ಮಹಾಶಯರು ತಮ್ಮ ಜೀವನಾನುಭವಗಳನ್ನು ಹಂಚಿಕೊಳ್ಳುತ್ತ, ನೆರೆದಿದ್ದ ಜನರಿಗೆ ಸ್ಫೂರ್ತಿಯ ಮಾತುಗಳನ್ನಾಡಿದರು ಹಾಗೂ ಸಹಕಾರಿಯ ಜನಪರ ಕೆಲಸಗಳನ್ನು ಮನದುಂಬಿ ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಸಹಕಾರಿಯ ವತಿಯಿಂದ ಹಿರಿಯ ಸದಸ್ಯರನ್ನು ಹಾಗೂ ಸಹಕಾರಿಯ ಓರ್ವ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಎಂದಿನಂತೆ ಸಾಮಾನ್ಯ ಸಭೆಯ ಸಂಜೆ ಸಹಕಾರಿಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಶಾಲೆಗಳಲ್ಲಿನ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಮತ್ತು ಸಾಮಾಜಿಕ ಸಂಸ್ಥೆಗಳಿಗೆ ನಗದು ಪ್ರೋತ್ಸಾಹಧನ ವಿತರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ನಿವೃತ್ತ ಉಪ ಮಹಾನಿರ್ದೇಶಕರಾದ ಡಾ. ಎನ್.ಕೆ. ಕೃಷ್ಣಕುಮಾರ್ ಅವರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲಾಗಿತ್ತು. ಮುಖ್ಯ ಅತಿಥಿಗಳು ತಾವು ಬೆಳೆದು ಬಂದ ದಾರಿಯನ್ನು ಉಲ್ಲೇಖಿಸಿ, ಸಹಕಾರಿ ಸಂಘವು ಮಕ್ಕಳಲ್ಲಿನ ಪ್ರತಿಭೆಯನ್ನು ಗುರುತಿಸಿ ಏರ್ಪಡಿಸಿರುವ ಪ್ರತಿಭಾ ಪುರಸ್ಕಾರದ ಮಹತ್ವ, ಅದರೊಟ್ಟಿಗೆ ಓದಿನ ಮಹತ್ವ ಹಾಗೂ ಗುರಿ ತಲುಪಲು ಬೇಕಾಗುವ ನಿರಂತರ ಪರಿಶ್ರಮದ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಮಾತುಗಳನ್ನಾಡಿದರು.

ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೂ ಮುನ್ನ 'ಯಕ್ಷಶ್ರೀ' ಕಲಾವೃಂದ ತಂಡದಿಂದ ನಡೆದ 'ಕಂಸವಧೆ ಪ್ರಸಂಗ' ಬಹಳ ಅಚ್ಚುಕಟ್ಟಾಗಿ ಮೂಡಿಬಂದಿತು. ಒಟ್ಟಾರೆ ಇಡೀ ಕಾರ್ಯಕ್ರಮವು ನೆರೆದಿದ್ದ ಸದಸ್ಯ ಬಂಧುಗಳಿಗೆ ಮತ್ತು ಮಕ್ಕಳಿಗೆ ಮನರಂಜನಾತ್ಮಕವಾಗಿಯೂ ಮಾಹಿತಿದಾಯಕವಾಗಿಯೂ ಇತ್ತು.




**ಹೊಸದುರ್ಗ :** ದಿನಾಂಕ 23.07.2026 ರಂದು ಗುರುವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ಸೀತಾರಾಘವ ಸೌಹಾರ್ದ ಸಹಕಾರಿ ಬ್ಯಾಂಕ್‌ನ ವಾರ್ಷಿಕ ಸಾಮಾನ್ಯ ಸಭೆಯು "ಶ್ರೀ ಗಣೇಶ ಸದನ", ಬಸ್ ನಿಲ್ದಾಣ, ಹೊಸದುರ್ಗದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹೆಚ್. ಎಸ್. ಶಿವಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕಲಬುರಗಿ :** ದಿನಾಂಕ. 09.08.2026ರಂದು ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಾಮಾನ್ಯ ಸಭೆಯನ್ನು ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ ಜರುಗಿತ್ತು. ಈ ಸಾಮಾನ್ಯ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ರವರು ಭಾಗವಹಿಸಿ ಸಂಯುಕ್ತ ಸಹಕಾರಿಯ ಪರವಾಗಿ ಶುಭ ಕೋರಿದರು. ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಭಾಗವಹಿಸಿದರು.




**ಬೆಳಗಾವಿ:** ದಿನಾಂಕ 01.08.2026 ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಇದರ 13ನೇ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ಎಮ್.ಕೆ.ಕವಟಗಿಮಠ ಕನ್ವೆಶನ ಹಾಲ್, ಹಾಲಟ್ಟಿ-ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಶ್ರೀ ಚರಮೂರ್ತಿ ಮಹಾ ಸ್ವಾಮೀಜಿ ಇವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಶ್ರೀ ರವೀಂದ್ರ ಪಾಟೀಲ, ಮಾನ್ಯ ಉಪನಿಬಂಧಕರು, ಬೆಳಗಾವಿ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ, ಸಹಕಾರಿ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸತೀಶ ಪಾಟೀಲ, ಸಿಬ್ಬಂದಿ ವರ್ಗದವರು, ಸಹಕಾರಿಯ ಸದಸ್ಯರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಜವಾಹರ ಮುಗ್ಗನವರ ಇವರು ಉಪಸ್ಥಿತ-ರಿದ್ದರು. ಬೆಳಗಾವಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಭಾಗವಹಿಸಿ, ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸಹಕಾರಿ ಸದಸ್ಯರಿಗೆ ನೀಡಲಾದ ಸಾಮಾನ್ಯ ಸಭೆಯ ಅಧಿಕಾರದ ಕುರಿತು ಮಾಹಿತಿಯನ್ನು ನೀಡಿದರು.



**ಕೊಪ್ಪಳ :** ದಿನಾಂಕ.22.08.2026ರಂದು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಗಂಗಾವತಿ ಕೊಪ್ಪಳ ಇದರ 8ನೇ ವಾರ್ಷಿಕ ಸಾಮಾನ್ಯ ಸಭೆ ಜರುಗಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಮಾನ್ಯ ಶ್ರೀ ಜಿ ಶ್ರೀಧರ್ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ ರವರು ವಹಿಸಿದರು. ಈ ಕಾರ್ಯಕ್ರಮದಲ್ಲಿ ಒಕ್ಕೂಟದ ಉಪಾಧ್ಯಕ್ಷರು ನಿರ್ದೇಶಕರು ಮತ್ತು RKDCC ಬ್ಯಾಂಕಿನ ನಿರ್ದೇಶಕರು ಮತ್ತು ಸಂಯುಕ್ತ ಸಹಕಾರಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಓಂಕಾರರವರು ಮತ್ತು ಸದಸ್ಯರು ಉಪಸ್ಥಿತರಿದ್ದರು.



**ಗದಗ:** ದಿನಾಂಕ 23.08.2026 ರಂದು ಗದಗ ಜಿಲ್ಲೆಯ ಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಗದಗ ಇದರ 28ನೇ ವರ್ಷದ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಗಾಣಿಗ ಭವನ ವಿವೇಕಾನಂದ ನಗರ ಗದಗ ಆಯೋಜಿಸಲಾಗಿತ್ತು. ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಬಸವರಾಜ ಬಿಂಗಿ, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಉದ್ಘಾಟಕರಾಗಿ ಶ್ರೀ ರವಿ ದಂಡಿನ ಹಾಗೂ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆ ಅವರು ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿ ಆಡಳಿತ ಮಂಡಳಿಯ ಸದಸ್ಯರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ಗಂಗಮ್ಮ ನಾಯ್ಕರ, ಸಹಕಾರಿಯ ಸಿಬ್ಬಂದಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.



**ಕೊಪ್ಪಳ** : ದಿನಾಂಕ. 01–08–2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಗಂಗಾವತಿ, ಕೊಪ್ಪಳ ಇವರ ಸಹಯೋಗದಲ್ಲಿ ಸಹಕಾರಿಗಳ ಜ್ಞಾನೋತ್ಸವ ಕಾರ್ಯಕ್ರಮವನ್ನು ಶ್ರೀ ಶಿವಶಾಂತವೀರ ಮಂಗಲ ಭವನ ಕೊಪ್ಪಳ ಇಲ್ಲಿ ಏರ್ಪಡಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ ವಹಿಸಿದರು ಈ ಕಾರ್ಯಕ್ರಮದಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಮಹಾಲಿಂಗಪ್ಪ ದೋಟಿಹಾಳ ನಿರ್ದೇಶಕರಾದ ಶ್ರೀ ಕುಮಾರಪ್ಪ ಸಿಂಗನಾಳ ಶ್ರೀ ಶಂಕರಗೌಡ ಹಿರೇಗೌಡ್ರ ಶ್ರೀ ಮುದ್ದಪ್ಪ ಬೇವಿನಹಳ್ಳಿ ಶ್ರೀ ಟಿ ಲೋಕೇಶಪ್ಪ ಶ್ರೀ ಬಸವರಾಜ ಪಡಿ ಶ್ರೀ ನಾಗಲಿಂಗಪ್ಪ ಪತ್ತಾರ ಶ್ರೀ ನೀಲನಗೌಡ ತಳವಗೇರಿ ಶ್ರೀ ಫಕ್ರುದ್ದೀನ್ ಸಾಬ್ ಸಬರದ ಶ್ರೀ ಬಸವರಾಜ ಗುಗ್ಗುಳಶೆಟ್ಟರ ಶ್ರೀ ನಾಗರಾಜ ನಾಗನೂರು ಶ್ರೀ ಗವಿಸಿದ್ದಯ್ಯ ಲಿಂಗಬಸಯ್ಯನಮಠ ಹಾಗೂ RKDCC ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ ಹಾಗೂ ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳು ಉಪಸ್ಥಿತರಿದ್ದರು. ಉದ್ಘಾಟನೆಯ ನಂತರ ಸಹಕಾರಿಗಳಿಗೆ ಲಿಖಿತ ಪರೀಕ್ಷೆ ಹಾಗೂ ಕ್ವಿಜ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಲಿಖಿತ ಪರೀಕ್ಷೆ ಹಾಗೂ ಕ್ವಿಜ್ ನಲ್ಲಿ 115 ಸಿಬ್ಬಂದಿಗಳು ಭಾಗವಹಿಸಿದರು.



**ಕಲಬುರಗಿ** : ದಿನಾಂಕ 16.08.2026ರಂದು ಕೃಷ್ಣಾ ಪರಿವಾರ ಸೌಹಾರ್ದ ಸಹಕಾರಿ ನಿ., ಕಲಬುರಗಿ ಇದರ 05ನೇ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಅತಿಥಿಗಳಾಗಿ ಭಾಗವಹಿಸಿದರು. ಕಲಬುರಗಿ ಪ್ರಾಂತೀಯ ಅಧಿಕಾರಿಯವರಾದ ಶ್ರೀ ಸಂಜಯ ಕೋರಟಕರರವರು ಉಪಸ್ಥಿತರಿದ್ದರು. ಮಾನ್ಯ ನಿರ್ದೇಶಕರು, ಮಾನ್ಯ ವೃತ್ತಿಪರ ನಿರ್ದೇಶಕರು ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಅಧ್ಯಕ್ಷರಿಗೆ ಹಾಗೂ ಆಡಳಿತ ಮಂಡಳಿ ಸದಸ್ಯರಿಗೆ ಶುಭಾಶಯಗಳನ್ನು ಕೋರಿದರು.



**ಕಲಬುರಗಿ** : ದಿನಾಂಕ 23.08.2026 ಶ್ರೀ ಧನಲಕ್ಷ್ಮಿ ಸೌಹಾರ್ದ ಸಹಕಾರಿ ಸಂಘ ನಿ., ಸರಸಂಬಾ ಸಹಕಾರಿಯ 24 ನೇ ವರ್ಷದ ಸಾಮಾನ್ಯ ಸಭೆ ಹಾಗೂ 25 ನೇ ವರ್ಷದ ಬೆಳ್ಳಿಹಬ್ಬದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ದಯಾಲಿಂಗೇಶ್ವರ ಆಶ್ರಮ ಸರಸಂಬಾ ಇದರ ಅಧ್ಯಕ್ಷರಾದ ಶ್ರೀ ಪ್ರಕಾಶ್ ಮುತ್ಯಾ ಇವರು ವಹಿಸಿದರು ಕಾರ್ಯಕ್ರಮದ ಉದ್ಘಾಟನೆಯನ್ನು ಸುಭಾಷ್ ಆರ್ ಗುತ್ತೇದಾರ, ಮಾನ್ಯ ಮಾಜಿ ಶಾಸಕರು ಆಳಂದ ಇವರು ನಡೆಸಿಕೊಟ್ಟರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್, ಕಲಬುರಗಿ ಸೌಹಾರ್ದ ಸಹಕಾರಿ ನಿ., ಕಲಬುರಗಿ ಸೌಹಾರ್ದ ಸಹಕಾ–ರಿಯ ಅಧ್ಯಕ್ಷರಾದ ಶ್ರೀ ಖೇಮಲಿಂಗ ಬಿ ಶೇಟಗಾರ, ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ಹಾಗೂ ಕಲಬುರಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿರವರು ಉಪಸ್ಥಿತರಿದ್ದರು.



**ಶಿವಮೊಗ್ಗ** : ದಿನಾಂಕ 23.08.2026ರಂದು ಶಿಕಾರಿಪುರ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ, ಶಿಕಾರಿಪುರ ಸಹಕಾರಿಯ 8ನೇ ಸಾಮಾನ್ಯ ಸಭೆಯನ್ನು ಡಿಸಿಸಿ ಬ್ಯಾಂಕ್ ಸುವರ್ಣ ಭವನ, ಶಿಕಾ–ರಿಪುರ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಹಾಗೂ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುಮೂರ್ತಿ ಎನ್. ರವರು ವಹಿಸಿದ್ದರು. ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 250 ಸದಸ್ಯರು ಹಾಜರಿದ್ದರು.



**ಶಿವಮೊಗ್ಗ :** ದಿನಾಂಕ 23.08.2026ರಂದು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಇದರ ರೈತಮಿತ್ರ ಅಡಿಕೆ ದಲ್ಲಾಳಿ ಮಂಡಿ ಶಿಕಾರಿಪುರ ವತಿಯಿಂದ ಅಡಿಕೆ ಬೆಳೆಯುವ ರೈತರಿಗಾಗಿ ಅಡಿಕೆ ಬೆಳೆ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಶಿಕಾರಿಪುರದ ಸುರಭಿ ಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರು ಹಾಗೂ ವಿಪ್ರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹ್ಯಾದ್ರಿ ಸೌಹಾರ್ದ ಒಕ್ಕೂಟದ ನಿರ್ದೇಶಕರಾದ ಶ್ರೀ ಗಿರೀಶ್ ಗುಡ್ಡಳ್ಳಿ ರವರು ಭಾಗವಹಿಸಿದ್ದರು. ವಿಪ್ರ ಸೌಹಾರ್ದ ಸಹಕಾರಿಯ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಮತ್ತು ರೈತರು ಭಾಗವಹಿಸಿದ್ದರು.



**ಕಲಬುರಗಿ :** ದಿನಾಂಕ 14.08.2026ರಂದು ಓಂ ಶ್ರೀ ಮಂಜುನಾಥ ಸ್ವಾಮಿ ಸೌಹಾರ್ದ ಸಹಕಾರಿ ಸಂಘ ನಿ., ಕಲಬುರಗಿ ಇದರ ಉದ್ಘಾಟನಾ ಸಮಾರಂಭದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ರವರು ಅತಿಥಿಗಳಾಗಿ ಭಾಗವಹಿಸಿದರು. ಪ್ರಾಂತೀಯ ಕಛೇರಿಯ ಕಾನೂನು ಅಧಿಕಾರಿಯವರು ಮತ್ತು ಕಲಬುರಗಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ಉಪಸ್ಥಿತರಿದ್ದರು. ಮಾನ್ಯ ವೃತ್ತಿಪರ ನಿರ್ದೇಶಕರು ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಿಗೆ ಹಾಗೂ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಶುಭಾಶಯಗಳನ್ನು ಕೋರಿದರು.



**ಕೊಪ್ಪಳ :** ದಿನಾಂಕ 16.08.2026 ರಂದು ಶ್ರೀ ಅಭಿನವ ಗವಿಸಿದ್ದೇಶ್ವರ ಸೌಹಾರ್ದ ಸಹಕಾರಿ ಸಂಘ ನಿ,. ಮುದೇನೂರು ಇದರ ಉದ್ಘಾಟನಾ ಸಮಾರಂಭದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶರಾದ ಶ್ರೀ ಜಿ. ಶ್ರೀಧರರವರು ಅತಿಥಿಗಳಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಓಂಕಾರ್ ಧರಣಿ ಹಾಗೂ ಕೋಟೆಪ್ಪ. ಕೆ ರವರು ಉಪಸ್ಥಿತರಿದ್ದರು ಮಾನ್ಯ ನಿರ್ದೇಶಕರು ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಿಗೆ ಹಾಗೂ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಶುಭಾಶಯಗಳನ್ನು ಕೋರಿದರು.



**ಕೊಪ್ಪಳ :** ದಿನಾಂಕ 16.08.2026 ರಂದು ನರ್ಮದಾ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಕುಷ್ಟಗಿ ಇದರ ಉದ್ಘಾಟನಾ ಸಮಾರಂಭದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶರಾದ ಶ್ರೀ ಜಿ. ಶ್ರೀಧರರವರು ಅತಿಥಿಗಳಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಓಂಕಾರ್ ಧರಣಿ ಹಾಗೂ ಕೋಟೆಪ್ಪ.ಕೆ ರವರು ಉಪಸ್ಥಿತರಿದ್ದರು. ಮಾನ್ಯ ನಿರ್ದೇಶಕರು ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಿಗೆ ಹಾಗೂ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಶುಭಾಶಯಗಳನ್ನು ಕೋರಿದರು.



**ಕಲಬುರಗಿ :** ದಿನಾಂಕ.17.08.2026ರಂದು ಅಯೋಧ್ಯಶ್ರೀ ಸೌಹಾರ್ದ ಸಹಕಾರಿ ಸಂಘ ನಿ., ಕಲಬುರಗಿ ಇದರ ಉದ್ಘಾಟನಾ ಸಮಾರಂಭದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಹಾಗೂ ಕಲಬುರಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟಿಲ್ ರವರು ಅತಿಥಿಗಳಾಗಿ ಭಾಗವಹಿಸಿದರು. ಕಲಬುರಗಿ ಪ್ರಾಂತೀಯ ಅಧಿಕಾರಿಯವರಾದ ಶ್ರೀ ಸಂಜಯ ಕೋರಟಕರರವರು ಉಪಸ್ಥಿತರಿದ್ದರು. ಮಾನ್ಯ ನಿರ್ದೇಶಕರು, ಮಾನ್ಯ ವೃತ್ತಿಪರ ನಿರ್ದೇಶಕರು ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಿಗೆ ಹಾಗೂ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಶುಭಾಶಯಗಳನ್ನು ಕೋರಿದರು.



**ತುಮಕೂರು** : ದಿನಾಂಕ 26.08.2026ರಂದು ಶ್ರೀ ಗುರುಕುಲ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಸಹಕಾರಿಯ 2025–26ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ತುಮಕೂರಿನ ಶ್ರೀ ಗುರುಕುಲ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ಹಾಗೂ ಕಿರಿಯ ಸಹಾಯಕರಾದ ಶ್ರೀ ಗೋವಿಂದ ರವರು ಉಪಸ್ಥಿತರಿದ್ದರು.



**ಹೊನ್ನಾಳಿ** : ಹೊನ್ನಾಳಿ ನ್ಯಾಮತಿ ವೀರಾಟ್ ವಿಶ್ವಕರ್ಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊನ್ನಾಳಿ ಸಹಕಾರಿಯ ಉದ್ಘಾಟನೆಯು ದಿನಾಂಕ 28–8–2026 ರಂದು ಹೊನ್ನಾಳಿಯಲ್ಲಿ ಜರುಗಿತು.

ಸಹಕಾರಿಯ ಉದ್ಘಾಟನೆಯನ್ನು ಹೊನ್ನಾಳಿಯ ಹಿರೇಕಲ್ಮಠದ ಶ್ರೀ ಷ॥ ಬ್ರ॥ ಒಡೆಯರ್ ಡಾ॥ ಚನ್ನಮಲ್ಲಿಕಾರ್ಜುನ ಶಿವಚಾರ್ಯ ಮಹಾಸ್ವಾಮಿಗಳ ಗಳು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಎಮ್ ಆರ್ ಪ್ರಭುದೇವ್ ರವರು ಭಾಗವಹಿಸಿ ಸಹಕಾರ ಚಳುವಳಿಯ ಇತಿಹಾಸ, ಸೌಹಾರ್ದ ಕಾಯ್ದೆಯ ಜಾರಿಯ ಹಿನ್ನೆಲೆ, ಉದ್ದೇಶಗಳು, ಹಾಗೂ ಆಡಳಿತ ಮಂಡಳಿಯ ಮತ್ತು ಸದಸ್ಯರ ಕರ್ತವ್ಯದ ಬಗ್ಗೆ ಮಾಹಿತಿ ನೀಡಿದರು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಎ ವಿ ರವಿಕುಮಾರ್ ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮಾಜದ ಪ್ರಮುಖರು, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಶಶಿಕುಮಾರ್ ಎಸ್ ರವರು ಉಪಸ್ಥಿತರಿದ್ದರು.



**ಬಂಟ್ವಾಳ** : ಪುತ್ತೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದ್ದು, ರಾಜ್ಯಾದ್ಯಂತ 22 ಶಾಖೆಗಳ ಮೂಲಕ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಿತ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ 23ನೇ ಶಾಖೆಯು ಸಿದ್ದಕಟ್ಟೆಯ ಕಣಿಯೂರು ಕಾಂಪ್ಲೆಕ್ಸ್‌ನಲ್ಲಿ ಆಗಸ್ಟ್ 29ರಂದು ಕರ್ನಾಟಕ ಸರ್ಕಾರದ ಮಾಜಿ ಸಚಿವರಾದ ಶ್ರೀಯುತ ಅಭಯಚಂದ್ರ ಜೈನ್ ಅವರಿಂದ ಉದ್ಘಾಟನೆಗೊಂಡಿತು.

ರಜತ ಮಹೋತ್ಸವದ ಸಂಭ್ರಮದಲ್ಲಿರುವ ಶ್ರೀ ಸರಸ್ವತಿ ಸಹಕಾರಿಯ ಸಿದ್ದಕಟ್ಟೆ ಶಾಖೆಯನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಅಭಯಚಂದ್ರ ಜೈನ್ ಅವರು, “ಸರಸ್ವತಿ ಸಹಕಾರಿಯು ಸಿದ್ದಕಟ್ಟೆಗೆ ಆಗಮಿಸಿರುವುದು ಸಂತೋಷದ ವಿಚಾರ. ಶ್ರೀ ಸರಸ್ವತಿ ಸಹಕಾರಿಯ 23ನೇ ಶಾಖೆಯನ್ನು ಉದ್ಘಾಟಿಸಲು ಸಂತೋಷಪಡುತ್ತಿದ್ದೇನೆ” ಎಂದು ಹೇಳಿದರು.

ಜಿಲ್ಲೆಯ ದೊಡ್ಡ ಹಾಗೂ ಪ್ರಾಮಾಣಿಕ ಸಹಕಾರಿ ಸಂಸ್ಥೆಯಾಗಿ ಗುರುತಿಸಿಕೊಂಡಿರುವ ಸಹಕಾರಿ ಧುರೀಣ ಶ್ರೀ ಎಸ್. ಆರ್. ಸತೀಶ್ಚಂದ್ರ ಅವರ ನೇತೃತ್ವದ ತಂಡವು ಸಿದ್ದಕಟ್ಟೆಯಲ್ಲಿ ಸರಸ್ವತಿ ಸಹಕಾರಿಯ ಶಾಖೆಯನ್ನು ಪ್ರಾರಂಭಿಸಿರುವುದಕ್ಕೆ ಅಭಿನಂದನೆ ಸಲ್ಲಿಸಿದರು. ಸಹಕಾರಿ ಸಂಘದಲ್ಲಿ ಪ್ರಾಮಾಣಿಕತೆ ಅತ್ಯಂತ ಮುಖ್ಯವಾಗಿದ್ದು, ಸತೀಶ್ಚಂದ್ರ ಅವರು ಪ್ರಾಮಾಣಿಕವಾಗಿ ಸಹಕಾರಿಯನ್ನು ಮುನ್ನಡೆಸುತ್ತಿರುವುದರಿಂದಲೇ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರಾಗಿ ಎರಡನೇ ಬಾರಿಗೆ ಆಯ್ಕೆಯಾಗಿದ್ದಾರೆ ಎಂದು ಹೇಳಿದರು. ಇಂತಹ ಸಹಕಾರಿಯ ನೇತೃತ್ವದಲ್ಲಿ ಸರಸ್ವತಿ ಸಹಕಾರಿಯು ಉತ್ತರೋತ್ತರ ಅಭಿವೃದ್ಧಿಯನ್ನು ಸಾಧಿಸಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕ ಪ್ರಶಸ್ತಿ, ಅಸಾಮಾನ್ಯ ಕನ್ನಡಿಗ ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ನಾರಾಯಣ ನಾಯಕ್ ಕಿನ್ನಾಜೆ ಅವರನ್ನು ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.

ಶ್ರೀ ಸರಸ್ವತಿ ಸಹಕಾರಿಯ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಎಸ್. ಆರ್. ಸತೀಶ್ಚಂದ್ರ ಅವರು ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಉಮೇಶ್ ಪ್ರಭು ಕೆ., ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ್ ನಾಯಕ್, ಸಹಕಾರಿಯ ನಿರ್ದೇಶಕರು, ಸಿಬ್ಬಂದಿ ವರ್ಗ, ಸದಸ್ಯರು ಹಾಗೂ ಹಿತೈಷಿಗಳು ಭಾಗವಹಿಸಿದ್ದರು.

# ರಾಷ್ಟ್ರೀಯ ಆರ್ಥಿಕ ಸೇರ್ಪಡೆ (NSFI) (2025-30) ಯ ದೃಷ್ಟಿಕೋನ (VISION): ಜನರ ಸಮಗ್ರ ಕಲ್ಯಾಣದತ್ತ ಎಲ್ಲರನ್ನೂ ಒಳಗೊಳ್ಳುವ ಆರ್ಥಿಕ ವ್ಯವಸ್ಥೆ

**ಮೂಲ : ನ್ಯಾಷನಲ್ ಸ್ಟ್ರಾಟೆಜಿ ಫಾರ್ ಫೈನಾನ್ಷಿಯಲ್ ಇನ್‌ಕ್ಲೂಷನ್ 2025–30**

**ಅನುವಾದ : ದಿವ್ಯ.ಟಿ., ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.**

ಆರ್ಥಿಕ ಸೇರ್ಪಡೆ (Financial Inclusion) ಉಪಕ್ರಮಗಳು ಸಾಮಾನ್ಯವಾಗಿ ಪೂರೈಕೆ–ಆಧಾರಿತ (Supply-side) ಕ್ರಮಗಳಿಂದ ಪ್ರಾರಂಭವಾಗುತ್ತವೆ. ಇದರ ಉದ್ದೇಶ ಇದುವರೆಗೆ ಹೊರಗುಳಿದ ಮತ್ತು ಅಂಚಿನಲ್ಲಿರುವ ಸಮಾಜದ ವರ್ಗಗಳಿಗೆ ಉಳಿತಾಯ, ಪಾವತಿಗಳು, ಹೂಡಿಕೆಗಳು, ಸಾಲ, ಹಣ ರವಾನೆ, ವಿಮೆ ಮತ್ತು ಪಿಂಚಣಿ ಮುಂತಾದ ನಿಯಂತ್ರಿತ ಆರ್ಥಿಕ ಸೇವೆಗಳನ್ನು ಕೈಗೆಟಕುವ, ಸುಲಭ, ವಿಶ್ವಾಸಾರ್ಹ ಮತ್ತು ನ್ಯಾಯಸಮ್ಮತ ರೀತಿಯಲ್ಲಿ ಒದಗಿಸುವುದಾಗಿದೆ. ಆರ್ಥಿಕ ಸೇರ್ಪಡೆ ಆರ್ಥಿಕ ಕ್ಷೇತ್ರದ ವ್ಯಾಪ್ತಿಗೆ ಸೇರಿದರೂ, ಅದರ ನೀತಿಗಳು ಸಾಮಾಜಿಕ–ಆರ್ಥಿಕ ಕ್ಷೇತ್ರಗಳಲ್ಲಿ ವ್ಯಾಪಕವಾದ ಧನಾತ್ಮಕ ಪರಿಣಾಮಗಳು ಮತ್ತು ಪರಸ್ಪರ ಸಂಬಂಧಗಳನ್ನು ಹೊಂದಿವೆ. ವಿಶ್ವಸಂಸ್ಥೆಯ 17 ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ (SDGs) ಎಂಟು ಗುರಿಗಳಲ್ಲಿ ಆರ್ಥಿಕ ಸೇರ್ಪಡೆಯ ಉಲ್ಲೇಖವಿದೆ. ಅವುಗಳೆಂದರೆ:

SDG–1 : ಬಡತನ ಕಡಿಮೆ ಮಾಡುವುದು, SDG–2 : ಹಸಿವು ನಿರ್ಮೂಲನೆ, ಆಹಾರ ಭದ್ರತೆ ಸಾಧನೆ ಮತ್ತು ಸುಸ್ಥಿರ ಕೃಷಿಯ ಉತ್ತೇಜನ, SDG–3 : ಆರೋಗ್ಯ ಮತ್ತು ಉತ್ತಮ ಜೀವನ, SDG–5 : ಲಿಂಗ ಸಮಾನತೆ ಮತ್ತು ಮಹಿಳೆಯರ ಆರ್ಥಿಕ ಸಬಲೀಕರಣ, SDG–8 : ಘನತೆಯುತ ಉದ್ಯೋಗ ಮತ್ತು ಆರ್ಥಿಕ ಬೆಳವಣಿಗೆ, SDG–9 : ಕೈಗಾರಿಕೆ, ನಾವೀನ್ಯತೆ ಮತ್ತು ಮೂಲಸೌಕರ್ಯಗಳಿಗೆ ಬೆಂಬಲ, SDG–10 : ಅಸಮಾನತೆ ಕಡಿತಗೊಳಿಸುವುದು, SDG–17 : ಅನುಷ್ಠಾನದ ಸಾಧನಗಳನ್ನು ಬಲಪಡಿಸುವುದು (ಕೋಷ್ಟಕ III.1)

2. ಆರ್ಥಿಕ ಸೇರ್ಪಡೆಯು ಒಂದು ಮಹತ್ವಾಂಕ್ಷಿತ ಪ್ರಯಾಣವಾಗಿದೆ. ಇದು ಇದುವರೆಗೆ ಹೊರಗುಳಿದ ಮತ್ತು ಸೌಲಭ್ಯ ವಂಚಿತ ವರ್ಗಗಳಿಗೆ ಔಪಚಾರಿಕ ಆರ್ಥಿಕ ವ್ಯವಸ್ಥೆಯ ಪ್ರವೇಶಾವಕಾಶಗಳನ್ನು ಸೃಷ್ಟಿಸುವುದರಿಂದ ಆರಂಭವಾಗುತ್ತದೆ. ಆದರೆ, ಇದರ ವ್ಯಾಪ್ತಿ ಕೇವಲ ಪ್ರವೇಶವನ್ನು ಒದಗಿಸುವುದಕ್ಕೆ ಸೀಮಿತವಾಗಿಲ್ಲ; ಜನರಿಗೆ ಪ್ರಯೋಜನವಾಗುವ ರೀತಿಯಲ್ಲಿ ಆರ್ಥಿಕ ಸೇವೆಗಳ ಪರಿಣಾಮಕಾರಿ ಬಳಕೆಯನ್ನು ಖಚಿತಪಡಿಸುವುದನ್ನೂ ಒಳಗೊಂಡಿದೆ. ಪರಿಣಾಮಕಾರಿ ಬಳಕೆಗೆ ಜನರು ಔಪಚಾರಿಕ ಆರ್ಥಿಕ ಸೇವೆಗಳನ್ನು ಬಳಸಲು ಆರ್ಥಿಕ ಕಾರಣವನ್ನು ಹೊಂದಿರಬೇಕು. ಇದು ಮುಖ್ಯವಾಗಿ ಉದ್ಯೋಗ, ಜೀವನೋಪಾಯ ಮೊದಲಾದವುಗಳಿಂದ ನಿಯಮಿತ ಆದಾಯ ಅಥವಾ ಹಣದ ಹರಿವನ್ನು ಹೊಂದಿರುವ ಸಾಮರ್ಥ್ಯದಿಂದ ಹಾಗೂ ಔಪಚಾರಿಕ ಆರ್ಥಿಕ ಸೇವೆಗಳನ್ನು ಬಳಸಲು ಸ್ಪಷ್ಟವಾದ ಆರ್ಥಿಕ ಪ್ರೋತ್ಸಾಹದಿಂದ ಸಾಧ್ಯವಾಗುತ್ತದೆ.

3. ಆರ್ಥಿಕ ಸೇವೆಗಳ ಬಳಕೆಯ ಸುಸ್ಥಿರತೆ ಮತ್ತು ವೃದ್ಧಿಗೆ ಜನರ ನಿರಂತರ ವಿಶ್ವಾಸ, ಸೂಕ್ತ ಉತ್ಪನ್ನಗಳು ಮತ್ತು ಸೇವೆಗಳು, ಉತ್ತಮ ಆರ್ಥಿಕ ಸಾಕ್ಷರತೆ, ಸಕ್ರಿಯ ಮತ್ತು ತ್ವರಿತ ದೂರು ಪರಿಹಾರ ವ್ಯವಸ್ಥೆ ಹಾಗೂ ತಮ್ಮ ಮಾತುಗಳಿಗೆ ಸ್ಪಂದನೆ ದೊರೆಯುತ್ತಿದೆ ಎಂಬ ಸಕಾರಾತ್ಮಕ ಭಾವನೆ ಅಗತ್ಯವಾಗಿವೆ. ಇವು ಆರ್ಥಿಕ ಸೇರ್ಪಡೆಯ ಗುಣಮಟ್ಟದ ಪ್ರಮುಖ ಅಂಶಗಳಾಗಿವೆ.

4. ಮೇಲಿನ ಸನ್ನಿವೇಶದಲ್ಲಿ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಆರ್ಥಿಕ ಸೇರ್ಪಡೆಯ ಪಾತ್ರವನ್ನು ಪರಿಗಣಿಸಿದಾಗ, ಆರ್ಥಿಕ ಸೇರ್ಪಡೆಯು ಕೇವಲ ಒಂದು ಗುರಿಯಲ್ಲ; ಬದಲಾಗಿ ಜನರ ಸಮಗ್ರ ಕಲ್ಯಾಣವನ್ನು ಖಚಿತಪಡಿಸುವ ಮಹತ್ತರ ಗುರಿಯನ್ನು ಸಾಧಿಸುವ ಸಾಧನವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

| ಕೋಷ್ಟಕ III.1 : ನಿರ್ದಿಷ್ಟ ಸುಸ್ಥಿರ ಅಭಿವೃದ್ಧಿ ಗುರಿಗಳು (SDGs) ಮತ್ತು ಅವುಗಳ ಗುರಿಗಳ ಸಾಧನೆಯಲ್ಲಿ ಆರ್ಥಿಕ ಸೇರ್ಪಡೆ (FI) ನೀತಿಗಳ ಪಾತ್ರ |
|---|
| SDG 1 : ಬಡತನ ಕಡಿಮೆ ಮಾಡುವುದು (Poverty Reduction) |
| ಆರ್ಥಿಕ ಸೇವೆಗಳಿಗೆ ಪ್ರವೇಶವನ್ನು ಸುಧಾರಿಸುವುದು ಹಾಗೂ ಕೌಶಲ್ಯಾಭಿವೃದ್ಧಿ/ಜೀವನೋಪಾಯ ಅವಕಾಶಗಳನ್ನು ಒದಗಿಸುವುದರ ಮೂಲಕ ಆರ್ಥಿಕ ಸೇರ್ಪಡೆಯು ಆದಾಯದ ನಿರಂತರತೆ, ಸಮರ್ಪಕತೆ ಮತ್ತು ಸುರಕ್ಷತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಇದರಿಂದಾಗಿ ಬಡತನವನ್ನು ಕಡಿಮೆ ಮಾಡಲು ನೆರವಾಗುತ್ತದೆ. |
| SDG 2 : ಹಸಿವು ನಿರ್ಮೂಲನೆ (Ending Hunger) |
| ಸಮಗ್ರ ಆರ್ಥಿಕ ವ್ಯವಸ್ಥೆಯು ಸುಸ್ಥಿರ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಾಲ ಆಧಾರಿತ ಹೂಡಿಕೆಗಳನ್ನು ಉತ್ತೇಜಿಸುತ್ತದೆ. ಇದರಿಂದ ಕೃಷಿ ಉತ್ಪಾದನೆ ಹೆಚ್ಚಾಗಿ, ಆಹಾರ ಭದ್ರತೆ ಬಲವಾಗುತ್ತದೆ. ಪರಿಣಾಮವಾಗಿ ಹಸಿವಿನ ಸಮಸ್ಯೆಯನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತದೆ. |
| SDG 3 : ಆರೋಗ್ಯ ಮತ್ತು ಉತ್ತಮ ಜೀವನ (Health and Wellbeing) |
| ಆರ್ಥಿಕ ಸೇರ್ಪಡೆಯು ತನ್ನ ಬಹುಮುಖ ಸಾಮಾಜಿಕ–ಆರ್ಥಿಕ ಆಯಾಮಗಳ ಮೂಲಕ ಮಾನವ ಅಭಿವೃದ್ಧಿಗೆ ನೆರವಾಗುತ್ತದೆ ಹಾಗೂ ಅಂಚಿನಲ್ಲಿರುವ ಮತ್ತು ದುರ್ಬಲ ವರ್ಗಗಳ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುತ್ತದೆ. ಇದರಿಂದ ಆರೋಗ್ಯ ಮತ್ತು ಸಮಗ್ರ ಕಲ್ಯಾಣವನ್ನು ಉತ್ತೇಜಿಸುತ್ತದೆ. |

| | |
|---|---|
| SDG 5 : ಲಿಂಗ ಸಮಾನತೆ (Gender Equality) | |
| ಲಿಂಗಸೂಕ್ಷ್ಮ ಆರ್ಥಿಕ ಸೇರ್ಪಡೆ ನೀತಿಗಳು ಮಹಿಳೆಯರನ್ನು ಸಬಲೀಕರಣಗೊಳಿಸುವ ಮೂಲಕ ಲಿಂಗ ಅಸಮಾನತೆಯನ್ನು ಕಡಿಮೆ ಮಾಡುತ್ತವೆ ಮತ್ತು ಅವರ ಒಟ್ಟಾರೆ ಸಾಮಾಜಿಕ-ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುತ್ತವೆ. | |
| SDG 8 : ಘನತೆಯುತ ಉದ್ಯೋಗ ಮತ್ತು ಆರ್ಥಿಕ ಬೆಳವಣಿಗೆ (Decent Work and Economic Growth) | |
| ಪರಿಸರ ವ್ಯವಸ್ಥೆ (Ecosystem) ಆಧಾರಿತ ಆರ್ಥಿಕ ಸೇರ್ಪಡೆಯು ಅಗತ್ಯ ಆರ್ಥಿಕ ನೆರವು ಒದಗಿಸುವುದರ ಮೂಲಕ ಆರ್ಥಿಕ ಬೆಳವಣಿಗೆಯನ್ನು ಬೆಂಬಲಿಸುತ್ತದೆ. ಇದು ಉದ್ಯೋಗಾವಕಾಶಗಳು ಮತ್ತು ಉದ್ಯಮಶೀಲತೆಯನ್ನು ಹೆಚ್ಚಿಸುವುದರ ಜೊತೆಗೆ ಬಳಕೆಯ ವೆಚ್ಚವನ್ನು ಉತ್ತೇಜಿಸುತ್ತದೆ. | |
| SDG 9 : ಕೈಗಾರಿಕೆ, ನಾವೀನ್ಯತೆ ಮತ್ತು ಮೂಲಸೌಕರ್ಯ (Industry, Innovation and Infrastructure) | |
| ಆರ್ಥಿಕ ಸೇರ್ಪಡೆ ನೀತಿಗಳು ಕೈಗಾರಿಕೆಗಳಿಗೆ, ವಿಶೇಷವಾಗಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ಸಾಲ ಸಂಪರ್ಕಗಳನ್ನು ಹಾಗೂ ಡಿಜಿಟಲ್ ಮೂಲಸೌಕರ್ಯವನ್ನು ಒದಗಿಸುವ ಮೂಲಕ ನಾವೀನ್ಯತೆಯನ್ನು ಉತ್ತೇಜಿಸುತ್ತವೆ ಮತ್ತು ಅವುಗಳ ಪ್ರಗತಿಗೆ ಬೆಂಬಲ ನೀಡುತ್ತವೆ. | |
| SDG 10 : ಅಸಮಾನತೆಗಳ ಕಡಿತ (Reducing Inequalities) | |
| ಬಡವರು, ಅಂಚಿನಲ್ಲಿರುವವರು ಮತ್ತು ದುರ್ಬಲ ವರ್ಗಗಳ ಉನ್ನತಿಗೆ ಹಾಗೂ ಕೊನೆಯ ಹಂತದ (Last Mile) ಜನರಿಗೆ ಸೇವೆ ತಲುಪಿಸುವುದಕ್ಕೆ ವಿಶೇಷ ಗಮನ ನೀಡುವ ಆರ್ಥಿಕ ಸೇರ್ಪಡೆ ನೀತಿಗಳು ಸಮಾಜದಲ್ಲಿನ ಅಸಮಾನತೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. | |
| SDG 17 : ಅನುಷ್ಠಾನದ ಸಾಧನಗಳನ್ನು ಬಲಪಡಿಸುವುದು (Strengthening the Means of Implementation) | |
| ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDGs) ಸಾಧಿಸಲು ಆರ್ಥಿಕ ಸೇರ್ಪಡೆಯು ಒಂದು ಪ್ರಮುಖ ಅನುಷ್ಠಾನ ಸಾಧನವಾಗಿದೆ. ಇದು ಉಳಿತಾಯ ಮತ್ತು ಹೂಡಿಕೆಗಳ ಕ್ರೋಢೀಕರಣವನ್ನು ಉತ್ತೇಜಿಸುವುದರ ಜೊತೆಗೆ ಬಳಕೆಯನ್ನು ಹೆಚ್ಚಿಸುತ್ತದೆ ಹಾಗೂ ಜನರ ಒಟ್ಟಾರೆ ಕಲ್ಯಾಣವನ್ನು ಸುಧಾರಿಸುತ್ತದೆ. ಇದರ ಮೂಲಕ ವ್ಯಾಪಕ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ನೆರವಾಗುತ್ತದೆ. | |

**ಆರ್ಥಿಕ ಸೇರ್ಪಡೆಯ ವ್ಯಾಖ್ಯಾನ :**

5. ಆರ್ಥಿಕ ಸೇರ್ಪಡೆ ಸಮಿತಿಯು (ಅಧ್ಯಕ್ಷರು: ಡಾ. ಸಿ. ರಂಗರಾಜನ್, RBI, 2008) ಆರ್ಥಿಕ ಸೇರ್ಪಡೆಯನ್ನು ಹೀಗೆ ವ್ಯಾಖ್ಯಾನಿಸಿದೆ: "ದುರ್ಬಲ ವರ್ಗಗಳು ಮತ್ತು ಕಡಿಮೆ ಆದಾಯದ ಗುಂಪುಗಳಂತಹ ಅಸುರಕ್ಷಿತ ವರ್ಗಗಳಿಗೆ ಕೈಗೆಟುಕುವ ವೆಚ್ಚದಲ್ಲಿ ಆರ್ಥಿಕ ಸೇವೆಗಳು ಹಾಗೂ ಸಮಯೋಚಿತ ಮತ್ತು ಸಮರ್ಪಕ ಸಾಲ ಸೌಲಭ್ಯಗಳನ್ನು ಒದಗಿಸುವ ಪ್ರಕ್ರಿಯೆ."

6. ನಂತರ ಆರ್ಥಿಕ ಸೇರ್ಪಡೆಯ ಮಧ್ಯಮಾವಧಿ ಮಾರ್ಗ ಸಮಿತಿಯು (ಅಧ್ಯಕ್ಷರು: ಶ್ರೀ ದೀಪಕ್ ಮೊಹಾಂತಿ, ಆರ್‌ಬಿಐ, 2015) ಆರ್ಥಿಕ ಸೇರ್ಪಡೆಯನ್ನು ಹೀಗೆ ಪರಿಗಣಿಸಿತು: "ಉಳಿತಾಯ, ಹಣ ರವಾನೆ, ಸಾಲ, ಸರ್ಕಾರಿ ಬೆಂಬಲಿತ ವಿಮೆ ಮತ್ತು ಪಿಂಚಣಿ ಉತ್ಪನ್ನಗಳನ್ನು ಒಳಗೊಂಡ ಮೂಲಭೂತ ಔಪಚಾರಿಕ ಆರ್ಥಿಕ ಉತ್ಪನ್ನಗಳು ಮತ್ತು ಸೇವೆಗಳ ಸಮೂಹಕ್ಕೆ ಸುಲಭ ಪ್ರವೇಶವನ್ನು ಒದಗಿಸುವುದು. ಇವುಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಕಡಿಮೆ ಆದಾಯದ ಕುಟುಂಬಗಳಿಗೆ ಸಮಂಜಸ ವೆಚ್ಚದಲ್ಲಿ, ಸೂಕ್ತ ರಕ್ಷಣೆಯೊಂದಿಗೆ ಒದಗಿಸಬೇಕು. ಜೊತೆಗೆ ಸಾಮಾಜಿಕ ನಗದು ವರ್ಗಾವಣೆಗಳ ಮೂಲಕ ಕ್ರಮೇಣ ಪೂರಕವಾಗಿರಬೇಕು ಹಾಗೂ ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ ಔಪಚಾರಿಕ ಆರ್ಥಿಕ ಪ್ರವೇಶವನ್ನು ಹೆಚ್ಚಿಸಬೇಕು. ವೆಚ್ಚ ಕಡಿತಗೊಳಿಸಲು ಮತ್ತು ಸೇವಾ ವಿತರಣೆಯನ್ನು ಸುಧಾರಿಸಲು ತಂತ್ರಜ್ಞಾನವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಬೇಕು."

7. NSFI (2019-24) ಆರ್ಥಿಕ ಸಾಕ್ಷರತೆ ಮತ್ತು ಗ್ರಾಹಕರ ರಕ್ಷಣೆಯನ್ನು ಉತ್ತೇಜಿಸುವುದರೊಂದಿಗೆ ಆರ್ಥಿಕ ಸೇರ್ಪಡೆಯನ್ನು ವಿಸ್ತರಿಸುವುದು, ಆಳಗೊಳಿಸುವುದು ಮತ್ತು ವೇಗಗೊಳಿಸುವುದನ್ನು ಗುರಿಯಾಗಿಸಿಕೊಂಡಿತ್ತು. ಇದರ ಉದ್ದೇಶ ಆರ್ಥಿಕ ಕಲ್ಯಾಣ, ಸಮೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುವುದಾಗಿತ್ತು.

8. ಕಳೆದ ದಶಕದಲ್ಲಿ ಬ್ಯಾಂಕ್ ಖಾತೆ ಮಾಲೀಕತ್ವವು ಬಹುತೇಕ ಸಾರ್ವತ್ರಿಕ ಹಂತವನ್ನು ತಲುಪಿರುವುದು, ಭೌತಿಕ ಮತ್ತು ಡಿಜಿಟಲ್ ಪ್ರವೇಶ ಮೂಲಸೌಕರ್ಯವು ಗಣನೀಯವಾಗಿ ವಿಸ್ತರಿಸಿರುವುದು ಹಾಗೂ ಗ್ರಾಹಕರ ಅರಿವು ಮತ್ತು ರಕ್ಷಣಾ ಕ್ರಮಗಳು ಸುಧಾರಿಸಿರುವುದನ್ನು ಪರಿಗಣಿಸಿ, ಆರ್ಥಿಕ ಸೇರ್ಪಡೆಯ ಗಮನವನ್ನು ಸಮನ್ವಯಿತ ಪರಿಸರ ವ್ಯವಸ್ಥೆ (Synergistic Ecosystem Approach) ಮೂಲಕ ಇನ್ನಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು ಅಗತ್ಯವಾಗಿದೆ.

ಇದು ಎಲ್ಲಾ ಪಾಲುದಾರರ ಸಮಗ್ರ ಮತ್ತು ನಿರಂತರ ಭಾಗವಹಿಸುವಿಕೆಯನ್ನು ಖಚಿತಪಡಿಸುವ ಮೂಲಕ ಜನರ ಕಲ್ಯಾಣದತ್ತ ನಿಜವಾದ ಎಲ್ಲರನ್ನೂ ಒಳಗೊಳ್ಳುವಿಕೆಯ ಆರ್ಥಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಸಹಕಾರಿಯಾಗುತ್ತದೆ. ಜೊತೆಗೆ, ಔಪಚಾರಿಕ ಆರ್ಥಿಕ ವ್ಯವಸ್ಥೆಯ ಪ್ರಯೋಜನಗಳನ್ನು ಪಡೆಯುವ ಅವಕಾಶಗಳಲ್ಲಿ ಇರುವ ಅಸಮಾನತೆಯನ್ನು ಕಡಿಮೆ ಮಾಡುತ್ತಾ ಕೊನೆಯ ಹಂತದ ಸೇವಾ ವಿತರಣೆಯ ಗುಣಮಟ್ಟ ಮತ್ತು ನಿರಂತರತೆಯನ್ನು ಗಣನೀಯವಾಗಿ ಸುಧಾರಿಸುತ್ತದೆ.

9. ಜೀವನೋಪಾಯ ಬೆಂಬಲ, ಮಾರುಕಟ್ಟೆ ಸಂಪರ್ಕಗಳು, ಆರ್ಥಿಕ

ಶಿಕ್ಷಣ ಮತ್ತು ಗ್ರಾಹಕರ ರಕ್ಷಣಾ ಉಪಕ್ರಮಗಳೊಂದಿಗೆ ಸಮರ್ಪಕವಾಗಿ ಸಂಯೋಜಿಸಲ್ಪಟ್ಟ ಆರ್ಥಿಕ ಸೇರ್ಪಡೆ ನೀತಿಗಳು ಜನರ ಆರ್ಥಿಕ ಕಲ್ಯಾಣವನ್ನು ಸುಧಾರಿಸುವ ಶಕ್ತಿಯುತ ಸಾಧನಗಳಾಗಿವೆ.

ಸಮಗ್ರವಾಗಿ ಅನುಸರಿಸಿದರೆ, ಆರ್ಥಿಕ ಸೇರ್ಪಡೆಯು ಕೆಳಗಿನ ನಾಲ್ಕು ಪ್ರಮುಖ ಫಲಿತಾಂಶಗಳನ್ನು ನೀಡಬಹುದು: ಆರ್ಥಿಕ ಸುರಕ್ಷತೆ (Financial Safety), ಆರ್ಥಿಕ ಭದ್ರತೆ (Financial Security), ಆರ್ಥಿಕ ಸ್ಥಿತಿಸ್ಥಾಪಕತ್ವ (Financial Resilience), ಆರ್ಥಿಕ ಶಿಸ್ತು (Financial Discipline) ಇವುಗಳು ಒಟ್ಟಾರೆ ಜನರ ಸಮಗ್ರ ಕಲ್ಯಾಣಕ್ಕೆ ಕೊಡುಗೆ ನೀಡುತ್ತವೆ.

10. ಆದ್ದರಿಂದ, NSFI: 2025–30ರ ಅಡಿಯಲ್ಲಿ ಸಾಧಿಸಬೇಕಾದ ಆರ್ಥಿಕ ಸೇರ್ಪಡೆಯ ಉದ್ದೇಶಗಳು ಮತ್ತು ನಿರೀಕ್ಷಿತ ಫಲಿತಾಂಶಗಳನ್ನು ಕೆಳಗೆ ನೀಡಲಾಗಿದೆ. ಚಿತ್ರ III.1 ಆರ್ಥಿಕ ಸೇರ್ಪಡೆಯ ಅಂಶಗಳು ಮತ್ತು ಫಲಿತಾಂಶಗಳ ಚಿತ್ರಾತ್ಮಕ ನಿರೂಪಣೆಯನ್ನು ಒದಗಿಸುತ್ತದೆ.

### ಆರ್ಥಿಕ ಸೇರ್ಪಡೆಯ ಉದ್ದೇಶ


ಆರ್ಥಿಕ ಸೇರ್ಪಡೆಯ ಉದ್ದೇಶವು ಸಮಾಜದ ವಿವಿಧ ಸಾಮಾಜಿಕ–ಆರ್ಥಿಕ ಮತ್ತು ಭೌಗೋಳಿಕ ವರ್ಗಗಳ ಜನರಿಗೆ ಉಳಿತಾಯ, ಪಾವತಿಗಳು, ಹಣ ರವಾನೆ, ಸಾಲ, ಹೂಡಿಕೆಗಳು, ವಿಮೆ ಹಾಗೂ ಪಿಂಚಣಿ ಸೇರಿದಂತೆ ಔಪಚಾರಿಕ ಆರ್ಥಿಕ ಸೇವೆಗಳ ಸಮಗ್ರ ಗುಚ್ಛಕ್ಕೆ ಸಮಾನತೆಯುತ (Equitable), ಜವಾಬ್ದಾರಿಯುತ (Responsible), ಸೂಕ್ತತೆ (Suitable) ಹಾಗೂ ಕೈಗೆಟಕುವ (Affordable) ಪ್ರವೇಶವನ್ನು ಖಚಿತಪಡಿಸುವುದಾಗಿದೆ. ಇದರೊಂದಿಗೆ ಪರಿಣಾಮಕಾರಿ ಆರ್ಥಿಕ ಸಾಕ್ಷರತೆ, ಬಲಿಷ್ಠ ಗ್ರಾಹಕ ಜಾಗೃತಿ ಹಾಗೂ ಗ್ರಾಹಕರ ರಕ್ಷಣಾ ಕ್ರಮಗಳನ್ನು ಸಹ ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

ಮೇಲಿನ ರೀತಿಯ ಆರ್ಥಿಕ ಸೇರ್ಪಡೆಯು ಎಲ್ಲಾ ಪಾಲುದಾರರ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ವ್ಯಕ್ತಿಗಳು (ಕುಟುಂಬಗಳು) ಹಾಗೂ ಸೂಕ್ಷ್ಮ ಉದ್ಯಮಗಳ ಆರ್ಥಿಕ ಸುರಕ್ಷತೆ, ಆರ್ಥಿಕ ಭದ್ರತೆ, ಆರ್ಥಿಕ ಸ್ಥಿತಿಸ್ಥಾಪತ್ವ ಮತ್ತು ಆರ್ಥಿಕ ಶಿಸ್ತುಗಳನ್ನು ಸುಧಾರಿಸುತ್ತದೆ.

11. ಮೇಲಿನ ವ್ಯಾಖ್ಯಾನದಲ್ಲಿ ಆರ್ಥಿಕ ಸೇವೆಗಳ ಸಮೂಹಕ್ಕೆ ಪ್ರವೇಶ ಎಂಬ ಪದಗಳನ್ನು ಕೆಳಗಿನಂತೆ ಅರ್ಥೈಸಬಹುದು:

(ಅ) ಸಮಾನತೆಯುತ (Equitable) – ಪ್ರವೇಶ ಮೂಲಸೌಕರ್ಯವು ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ಸಮಂಜಸವಾಗಿ ಮತ್ತು ಸಮಾನ ರೀತಿಯಲ್ಲಿ ಲಭ್ಯವಿರಬೇಕು.

**ಚಿತ್ರ III.1 : ಆರ್ಥಿಕ ಸೇರ್ಪಡೆ – ಪ್ರಮುಖ ಅಂಶಗಳು ಹಾಗೂ ನಿರೀಕ್ಷಿತ ಫಲಿತಾಂಶಗಳು**




(ಆ) ಜವಾಬ್ದಾರಿಯುತ (Responsible) – ಆರ್ಥಿಕ ಸೇವಾ ಪೂರೈಕೆದಾರರು ತಮ್ಮ ಉತ್ಪನ್ನಗಳು ಅಥವಾ ಸೇವೆಗಳು ಗ್ರಾಹಕರ ಸ್ವತಂತ್ರ ಆಯ್ಕೆ, ಹಿತಾಸಕ್ತಿ ಮತ್ತು ಸೂಕ್ತ ಉತ್ಪನ್ನವನ್ನು ಆಯ್ಕೆ ಮಾಡುವ ಹಕ್ಕಿಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಹಾಗೆಯೇ ಅವು ಗ್ರಾಹಕರ ಆರ್ಥಿಕ, ವರ್ತನಾತ್ಮಕ ಅಥವಾ ಸಾಮಾಜಿಕ ಫಲಿತಾಂಶಗಳಿಗೆ ಧಕ್ಕೆಯಾಗಬಾರದು.

(ಇ) ಸೂಕ್ತತೆ (Suitable) – ಆರ್ಥಿಕ ಉತ್ಪನ್ನಗಳು ಮತ್ತು ಸೇವೆಗಳು ಗ್ರಾಹಕರ ಅಗತ್ಯತೆ, ಆರ್ಥಿಕ ಪರಿಸ್ಥಿತಿ ಹಾಗೂ ತಿಳುವಳಿಕೆಗೆ ಅನುಗುಣವಾಗಿರಬೇಕು. ಜನರು ತಮ್ಮ ಅಗತ್ಯಕ್ಕೆ ತಕ್ಕ ಉತ್ತಮ ಆಯ್ಕೆಯನ್ನು ಮಾಡಿಕೊಳ್ಳಲು ವಿಭಿನ್ನ ಅಥವಾ ಕಸ್ಟಮೈಸ್ ಸೇವೆಗಳು ಲಭ್ಯವಿರಬೇಕು.

(ಈ) ಕೈಗೆಟಕುವ (Affordable) – ಮೂಲಭೂತ ಆರ್ಥಿಕ ಸೇವೆಗಳಾದ ಮೂಲ ವಹಿವಾಟು ಖಾತೆ, ಮೂಲ ಉಳಿತಾಯ ಮತ್ತು ಹೂಡಿಕೆ ಖಾತೆ, ಸಣ್ಣ ಮೊತ್ತದ ಹಣ ರವಾನೆ ಹಾಗೂ ಸಣ್ಣ ಮೌಲ್ಯದ ಡಿಜಿಟಲ್ ಪಾವತಿಗಳನ್ನು ಉಚಿತವಾಗಿ ಒದಗಿಸಬೇಕು. ಇತರ ಸೇವೆಗಳ ದರ ನಿಗದಿಯಲ್ಲಿ ಸೇವೆಗಳ ಅಂಚಿನ ವೆಚ್ಚವನ್ನು ಪರಿಗಣಿಸಿ ಕೈಗೆಟಕುವ ಅಂಶವನ್ನು ಒಳಗೊಂಡಿರಬೇಕು.

12. ಆರ್ಥಿಕ ಸೇರ್ಪಡೆಯ ಫಲಿತಾಂಶವಾಗಿ ಸ್ಥಾನೀಕರಿಸಲಾದ

ಆರ್ಥಿಕ ಸುರಕ್ಷತೆ, ಭದ್ರತೆ, ಸ್ಥಿತಿಸ್ಥಾಪಕತ್ವ ಮತ್ತು ಶಿಸ್ತು ಎಂಬ ನಾಲ್ಕು ಪ್ರಮುಖ ಫಲಿತಾಂಶಗಳ ಚತುರ್ಭುಜವು (Quadrangle) ಕೋಷ್ಟಕ III.1 ರಲ್ಲಿ ನೀಡಿರುವ ನಿರ್ದಿಷ್ಟ ಆಧಾರಸ್ತಂಭಗಳ ಮೇಲೆ ನಿಂತಿದೆ.

### ಆರ್ಥಿಕ ಸೇರ್ಪಡೆಯ (FI) ಪರಿಸರ ವ್ಯವಸ್ಥೆ

13. ಈಗಾಗಲೇ ಚರ್ಚಿಸಿದಂತೆ, ಆರ್ಥಿಕ ಸೇರ್ಪಡೆಯ ಉಪಕ್ರಮಗಳ ಪರಿಣಾಮಕಾರಿತ್ವ ಮತ್ತು ಫಲಿತಾಂಶಗಳನ್ನು ಖಚಿತಪಡಿಸಲು ಸಮಗ್ರ ಪರಿಸರ ವ್ಯವಸ್ಥೆ (Ecosystem Approach) ಅಗತ್ಯವಾಗಿದೆ. ಆದ್ದರಿಂದ, ಆರ್ಥಿಕ ಸೇರ್ಪಡೆಯ (FI) ಪರಿಸರ ವ್ಯವಸ್ಥೆಯ ಸ್ಪಷ್ಟ ತಿಳುವಳಿಕೆ ಮತ್ತು ವ್ಯಾಖ್ಯಾನವು ಸಾಮಾನ್ಯ ಗುರಿಗಳನ್ನು ಸಾಧಿಸಲು ನೆರವಾಗುತ್ತದೆ.


14. FI ಪರಿಸರ ವ್ಯವಸ್ಥೆ ಎಂದರೆ ಆರ್ಥಿಕ ಸೇರ್ಪಡೆಯ ಉಪಕ್ರಮಗಳು ಹಾಗೂ ಅದರ ಫಲಿತಾಂಶವಾದ ಜನರ ಕಲ್ಯಾಣದೊಂದಿಗೆ ಸಂಬಂಧ ಹೊಂದಿರುವ ಅಥವಾ ಕಾರ್ಯನಿರ್ವಹಿಸುವ ಪಾಲುದಾರರ ಸಮನ್ವಯಿತ ಜಾಲವಾಗಿದೆ. ಇದರ ಫಲಿತಾಂಶಗಳು ಆರ್ಥಿಕ ಸುರಕ್ಷತೆ, ಭದ್ರತೆ, ಸ್ಥಿತಿಸ್ಥಾಪಕತ್ವ ಮತ್ತು ಶಿಸ್ತು ರೂಪದಲ್ಲಿ ವ್ಯಕ್ತವಾಗುತ್ತವೆ.

**ಕೋಷ್ಟಕ III.1 : ಆರ್ಥಿಕ ಸುರಕ್ಷತೆ, ಆರ್ಥಿಕ ಭದ್ರತೆ, ಆರ್ಥಿಕ ಸ್ಥಿತಿಸ್ಥಾಪಕತ್ವ ಮತ್ತು ಆರ್ಥಿಕ ಶಿಸ್ತು ಎಂಬ ಚತುರ್ಭುಜ ಹಾಗೂ ಅವುಗಳ ಆಧಾರಸ್ತಂಭಗಳು**

| ಆಯಾಮ | ಆಧಾರಸ್ತಂಭಗಳು | ಆಧಾರಸ್ತಂಭಗಳ ವಿವರಣಾತ್ಮಕ ವಿವರಗಳು |
|---|---|---|
| **ಆರ್ಥಿಕ ಸುರಕ್ಷತೆ –** "ದೈನಂದಿನ ವಹಿವಾಟುಗಳನ್ನು ಸರಾಗವಾಗಿ ನಿರ್ವಹಿಸುವುದು" | ಸೂಕ್ತ ಪ್ರವೇಶ. ಜೀವನೋಪಾಯ ಬೆಂಬಲ. ಗ್ರಾಹಕ ರಕ್ಷಣೆ. | • ನ್ಯಾಯಸಮ್ಮತ, ಸೂಕ್ತ ಮತ್ತು ಕೈಗೆಟಕುವ ಆರ್ಥಿಕ ಉತ್ಪನ್ನಗಳು ಹಾಗೂ ಸೇವೆಗಳು.<br>• ತ್ವರಿತ, ಸರಳ ಮತ್ತು ಪರಿಣಾಮಕಾರಿ ದೂರು ಪರಿಹಾರ ವ್ಯವಸ್ಥೆ.<br>• ಮೂಲಭೂತ ಜೀವನ ನಿರ್ವಹಣೆಯ ಅಗತ್ಯಗಳ ಪೂರೈಕೆ (ಕುಟುಂಬ ಮಟ್ಟದಲ್ಲಿ ದೈನಂದಿನ ಜೀವನಕ್ಕೆ ಅಗತ್ಯವಾದ ಆಹಾರ, ವಸತಿ, ಶಿಕ್ಷಣ, ಸಂಚಾರ ಇತ್ಯಾದಿ ಕನಿಷ್ಠ ಮೂಲಭೂತ ಅಗತ್ಯಗಳು).<br>• ವೇತನ ಆಧಾರಿತ ಅಥವಾ ವೇತನೇತರ ಜೀವನೋಪಾಯ ಚಟುವಟಿಕೆಗಳ ಮೂಲಕ ನಿಯಮಿತ ಮತ್ತು ನಿರಂತರ ಆದಾಯದ ಹರಿವು. |
| **ಆರ್ಥಿಕ ಭದ್ರತೆ –** "ಯಾವುದೇ ಆಕಸ್ಮಿಕ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ" | | • ನಿಯಮಿತ ಉಳಿತಾಯ – ದ್ರವ ರೂಪದ ಉಳಿತಾಯ (ಕನಿಷ್ಠ ಎರಡು ತಿಂಗಳ ಸರಾಸರಿ ಕುಟುಂಬ ವೆಚ್ಚಗಳನ್ನು ಭರಿಸಲು ಸಾಕಾಗುವಷ್ಟು) ಹಾಗೂ ದೀರ್ಘಾವಧಿಯ ಉಳಿತಾಯ (ಭೌತಿಕ ಅಥವಾ ಆರ್ಥಿಕ ಆಸ್ತಿಗಳ ರೂಪದಲ್ಲಿ).<br>• ಯಾವುದೇ ಪಿಂಚಣಿ ಯೋಜನೆಗೆ ನಿರಂತರ ಸದಸ್ಯತ್ವ/ಚಂದಾದಾರಿಕೆ (ನಿವೃತ್ತಿ ವೇತನ ಪಿಂಚಣಿ, ಅಟಲ್ ಪಿಂಚಣಿ ಯೋಜನೆ ಅಥವಾ ಇತರೆ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳು).<br>• ಪರಿಣಾಮಕಾರಿ ಪೂರ್ವಭಾವಿ ಗ್ರಾಹಕ ಸಂರಕ್ಷಣಾ ಕ್ರಮಗಳು ಹಾಗೂ ಠೇವಣಿ ವಿಮಾ ಸೌಲಭ್ಯ. |
| **ಆರ್ಥಿಕ ಸ್ಥಿತಿಸ್ಥಾಪಕತ್ವ –** "ಆರ್ಥಿಕ ಹಿನ್ನಡೆಗಳಿಂದ ಚೇತರಿಸಿಕೊಳ್ಳುವ ಸಾಮರ್ಥ್ಯ" | ವಿಮಾ ರಕ್ಷಣೆ. ಕ್ರೆಡಿಟ್ ಸೌಲಭ್ಯಗಳು. | • ಕೈಗೆಟಕುವ ಹಾಗೂ ಭರಿಸಬಹುದಾದ ವೆಚ್ಚದಲ್ಲಿ ಜಾರಿಯಲ್ಲಿರುವ (ಅವಧಿ ಮುಗಿಯದ) ವಿಮಾ ರಕ್ಷಣೆ – ಜೀವ ವಿಮೆ, ಆರೋಗ್ಯ ವಿಮೆ ಹಾಗೂ ಆಸ್ತಿ ವಿಮೆ (ವಾಹನಗಳು, ಆಸ್ತಿಗಳು, ಯಂತ್ರೋಪಕರಣಗಳು ಇತ್ಯಾದಿ).<br>• ಅತಿಯಾದ ಸಾಲದ ಹೊರೆ ಅಥವಾ ದೈನಂದಿನ ಜೀವನಕ್ಕೆ ಅಡ್ಡಿಯಾಗುವ ನಷ್ಟಗಳನ್ನು ಉಂಟು ಮಾಡದೇ, ಜೀವಹಾನಿ, ಜೀವನೋಪಾಯ ನಷ್ಟ ಅಥವಾ ಆಸ್ತಿ ನಷ್ಟದಂತಹ ಆರ್ಥಿಕ ಹಿನ್ನಡೆಗಳು ಅಥವಾ ಹಠಾತ್ ಉಂಟಾಗುವ ಸಂಕಷ್ಟಕರ ಪರಿಸ್ಥಿತಿಗಳನ್ನು ಸಮಂಜಸವಾಗಿ ಎದುರಿಸಲು ನ್ಯಾಯಸಮ್ಮತ ತುರ್ತು ಸಾಲ ಸೌಲಭ್ಯ. |
| **ಆರ್ಥಿಕ ಶಿಸ್ತು –** "ಸ್ಥಿರ ಆರ್ಥಿಕ ಭವಿಷ್ಯದ ಕಡೆಗೆ ವರ್ತನೆ ಮತ್ತು ನಡವಳಿಕೆ" | ಆರ್ಥಿಕ ಶಿಕ್ಷಣ. ಅನುಭವದ ಕಲಿಕೆ | • ಆರ್ಥಿಕ ಜಾಗೃತಿ ಮತ್ತು ಆತ್ಮವಿಶ್ವಾಸ.<br>• ವೈವಿಧ್ಯಮಯ ಹೂಡಿಕೆಗಳು – ಉಳಿತಾಯ ಅಥವಾ ಹೂಡಿಕೆಗಳನ್ನು ವಿವಿಧ ಬ್ಯಾಂಕುಗಳು ಮತ್ತು ವಿವಿಧ ಆಸ್ತಿ ವರ್ಗಗಳಲ್ಲಿ ಹಂಚಿಕೆ ಮಾಡುವುದು.<br>• ಸುಸ್ಥಿರ ಸಾಲಭಾರ – ಕುಟುಂಬದ ಮಾಸಿಕ ಆದಾಯದ ಅರ್ಧಕ್ಕಿಂತ ಹೆಚ್ಚಿನ ಮೊತ್ತವು ಬಾಕಿ ಸಾಲಗಳ ಮಾಸಿಕ ಮರುಪಾವತಿಗೆ ಹೋಗದಿರುವುದು.<br>• ವಾಸ್ತವಿಕ ಗುರಿ ನಿರ್ಧಾರ ಮತ್ತು ಯೋಜನೆ – ತನ್ನ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಆರ್ಥಿಕ ಗುರಿಗಳನ್ನು ನಿಗದಿಪಡಿಸುವುದು ಹಾಗೂ ಭವಿಷ್ಯದ ವೆಚ್ಚಗಳು ಅಥವಾ ಜೀವನದ ಪ್ರಮುಖ ಸಂದರ್ಭಗಳಿಗಾಗಿ (ಮಕ್ಕಳ ಶಿಕ್ಷಣ, ವಿವಾಹ, ನಿವೃತ್ತಿ ಇತ್ಯಾದಿ) ಮುಂಚಿತವಾಗಿ ಯೋಜನೆ ರೂಪಿಸುವುದು. |

ಈ ಪರಿಸರ ವ್ಯವಸ್ಥೆಯಲ್ಲಿ ಕೆಳಗಿನ ಪಾಲುದಾರರು ಸೇರಿರುತ್ತಾರೆ: ಬ್ಯಾಂಕುಗಳು ಮತ್ತು ಆರ್ಥಿಕ ಸಂಸ್ಥೆಗಳು, NABARD, SIDBI ಮುಂತಾದ ಸಂಸ್ಥೆಗಳು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ಆರ್ಥಿಕ ಕ್ಷೇತ್ರದ ನಿಯಂತ್ರಕ ಸಂಸ್ಥೆಗಳು, SROs / IBA, ಫಿನ್‌ಟೆಕ್ ಕಂಪನಿಗಳನ್ನು ಒಳಗೊಂಡ ಖಾಸಗಿ ಸಂಸ್ಥೆಗಳು, ಚಿಂತನ ವೇದಿಕೆಗಳು (Think Tanks), ಶೈಕ್ಷಣಿಕ ಸಂಸ್ಥೆಗಳು (Academia), ಸಮುದಾಯ ಸಂಘಟನೆಗಳು, ಆರ್ಥಿಕ ಸಾಕ್ಷರತಾ ಕೇಂದ್ರಗಳು ಮತ್ತು NCFE, ಜೀವನೋಪಾಯ ಅವಕಾಶ ಒದಗಿಸುವ ಸಂಸ್ಥೆಗಳು, ಕೌಶಲ್ಯಾಭಿವೃದ್ಧಿ ಸಂಸ್ಥೆಗಳು ಈ ಎಲ್ಲಾ ಪಾಲುದಾರರ ನಿರಂತರ ಮತ್ತು ಸಮನ್ವಯಿತ ಕಾರ್ಯನಿರ್ವಹಣೆ ಆರ್ಥಿಕ ಸೇರ್ಪಡೆ ನೀತಿಗಳ ಪರಿಣಾಮಕಾರಿತ್ವ ಮತ್ತು ಫಲಿತಾಂಶಮುಖಿತ್ವಕ್ಕೆ ಅತ್ಯಗತ್ಯವಾಗಿದೆ (ಚಿತ್ರ III.2).

**ಚಿತ್ರ III.2 : ಆರ್ಥಿಕ ಸೇರ್ಪಡೆಯ (FI) ಪರಿಸರ ವ್ಯವಸ್ಥೆ**




## NSFI (2025-30) ಯ ದೃಷ್ಟಿಕೋನ

15. ಮೇಲಿನ ಚರ್ಚೆಗಳ ಆಧಾರದ ಮೇಲೆ NSFI ಯ ದೃಷ್ಟಿಕೋನವನ್ನು ಕೆಳಗಿನಂತೆ ನಿರ್ಧರಿಸಲಾಗಿದೆ.

ಜನರ ಸಮಗ್ರ ಕಲ್ಯಾಣವನ್ನು ಸಾಧಿಸುವ ಉದ್ದೇಶದಿಂದ, ಸಮಾನತೆಯುತ, ಜವಾಬ್ದಾರಿಯುತ, ಸೂಕ್ತತೆ ಹಾಗೂ ಕೈಗೆಟಕುವ ಆರ್ಥಿಕ ಸೇವೆಗಳ ವಿತರಣೆಯನ್ನು ಖಚಿತಪಡಿಸುವ ಮೂಲಕ, ಜೀವನೋಪಾಯ ಉತ್ತೇಜಕ ಅಂಶಗಳು, ಪರಿಣಾಮಕಾರಿ ಆರ್ಥಿಕ ಸಾಕ್ಷರತೆ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಹಾಗೂ ಬಲಿಷ್ಠ ಗ್ರಾಹಕರ ರಕ್ಷಣಾ ವ್ಯವಸ್ಥೆಗಳ ಬೆಂಬಲದೊಂದಿಗೆ, ಎಲ್ಲಾ ಪಾಲುದಾರರ ಸಮನ್ವಯಿತ ಪ್ರಯತ್ನಗಳ ಮೂಲಕ ಆರ್ಥಿಕ ಸೇರ್ಪಡೆ ಪರಿಸರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವುದು.

16. 2025–30ರ ಅವಧಿಗೆ ಸಂಬಂಧಿಸಿದ ರಾಷ್ಟ್ರೀಯ ಆರ್ಥಿಕ ಸೇರ್ಪಡೆ ಕಾರ್ಯತಂತ್ರವು (NSFI: 2025-30) ವ್ಯಾಪಕ ಪಾಲುದಾರರ ಸಮಾಲೋಚನೆಗಳ ಫಲಿತಾಂಶವಾಗಿದೆ. ಈ ಕಾರ್ಯತಂತ್ರವು NSFI 2019–24ರ ಸಾಧನೆಗಳನ್ನು ಆಧರಿಸಿಕೊಂಡಿದ್ದು, ಆರ್ಥಿಕ ಸೇರ್ಪಡೆಯ ಉಪಕ್ರಮಗಳನ್ನು ಇನ್ನಷ್ಟು ಆಳಗೊಳಿಸುವುದು, ನಿರಂತರಗೊಳಿಸುವುದು ಮತ್ತು ಸಮನ್ವಯಗೊಳಿಸುವುದರ ಮೇಲೆ ಗಮನಹರಿಸಿದೆ.

## ಸೆಪ್ಟೆಂಬರ್ 5ರ ಶಿಕ್ಷಕರ ದಿನಾಚರಣೆ ವಿಶೇಷ ಲೇಖನ

# ಗುರುವೇ ದಾರಿ ತೋರಿಸುವ ದೀಪ

# “ಶಿಕ್ಷಣವೇ ಸಹಕಾರದ ಶಕ್ತಿ, ತರಬೇತಿಯೇ ಸಹಕಾರದ ಪ್ರಗತಿಯ ದಾರಿ”

# ಸೆಪ್ಟೆಂಬರ್ 5ರ ಶಿಕ್ಷಕರ ದಿನದ ಮಹತ್ವ

– ಶ್ರೀಮತಿ ಸವಿತ ಎನ್ ಇ ಕಿರಿಯ ಅಧಿಕಾರಿ ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಮಾನವನ ಜೀವನದಲ್ಲಿ ಕೆಲವು ವ್ಯಕ್ತಿಗಳ ಪ್ರಭಾವ ಎಂದಿಗೂ ಮರೆಯಲಾಗದು. ಅಂತಹ ಮಹತ್ವದ ವ್ಯಕ್ತಿಗಳಲ್ಲಿ ಶಿಕ್ಷಕರ ಸ್ಥಾನ ಅತ್ಯಂತ ವಿಶೇಷವಾದದ್ದು. ಜ್ಞಾನವನ್ನು ನೀಡುವುದಷ್ಟೇ ಅಲ್ಲದೆ, ವ್ಯಕ್ತಿತ್ವವನ್ನು ರೂಪಿಸಿ, ಬದುಕಿನ ಸರಿಯಾದ ದಾರಿಯನ್ನು ತೋರಿಸುವವರು ಶಿಕ್ಷಕರು. ಆದ್ದರಿಂದಲೇ ಶಿಕ್ಷಕರನ್ನು ಸಮಾಜದ ಭವಿಷ್ಯ ನಿರ್ಮಾತೃಗಳು ಎಂದು ಗೌರವಿಸಲಾಗುತ್ತದೆ.

ಭಾರತದಲ್ಲಿ ಪ್ರತಿವರ್ಷ ಸೆಪ್ಟೆಂಬರ್ 5ರಂದು ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಭಾರತದ ಖ್ಯಾತ ತತ್ವಜ್ಞಾನಿ, ಶಿಕ್ಷಣತಜ್ಞ ಹಾಗೂ ಭಾರತದ ಎರಡನೇ ರಾಷ್ಟ್ರಪತಿಯಾಗಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನ. ಅವರು 1888ರ ಸೆಪ್ಟೆಂಬರ್ 5ರಂದು ಜನಿಸಿದರು. ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ಅಪಾರ ಕೊಡುಗೆ ಹಾಗೂ ಶಿಕ್ಷಕ ವೃತ್ತಿಯ ಮೇಲಿನ ಅವರ ಗೌರವದ ಹಿನ್ನೆಲೆಯಲ್ಲಿ ಅವರ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತಿದೆ.

### ಶಿಕ್ಷಕರ ದಿನದ ಹಿಂದಿರುವ ಸ್ಫೂರ್ತಿ

ಡಾ. ರಾಧಾಕೃಷ್ಣನ್ ಅವರು ಕೇವಲ ರಾಷ್ಟ್ರಪತಿಯಾಗಿರಲಿಲ್ಲ; ಅವರು ಶ್ರೇಷ್ಠ ಶಿಕ್ಷಕ, ತತ್ವಜ್ಞಾನಿ ಮತ್ತು ಚಿಂತಕರಾಗಿದ್ದರು. ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಅವರು ಶಿಕ್ಷಣವನ್ನು ವ್ಯಕ್ತಿಯ ಹಾಗೂ ಸಮಾಜದ ಪರಿವರ್ತನೆಯ ಪ್ರಮುಖ ಸಾಧನವೆಂದು ಪರಿಗಣಿಸಿದ್ದರು. 1962ರಿಂದ ಭಾರತದಲ್ಲಿ ಸೆಪ್ಟೆಂಬರ್ 5ರಂದು ಶಿಕ್ಷಕರ ದಿನವನ್ನು ಆಚರಿಸುವ ಪರಂಪರೆ ಆರಂಭವಾಯಿತು.

ಶಿಕ್ಷಕರ ದಿನವು ಕೇವಲ ಒಂದು ಆಚರಣೆಯ ದಿನವಲ್ಲ. ಇದು ಶಿಕ್ಷಕರ ಸೇವೆ, ತ್ಯಾಗ, ಜ್ಞಾನ ಮತ್ತು ಮಾರ್ಗದರ್ಶನವನ್ನು ಸ್ಮರಿಸುವ ದಿನ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಸಮಾಜಕ್ಕೆ ನೆನಪಿಸುವ ದಿನವೂ ಹೌದು.

### ಪಾಠಕ್ಕಿಂತ ಮಿಗಿಲಾದ ಬದುಕಿನ ಶಿಕ್ಷಣ

ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದ ಜ್ಞಾನವನ್ನು ಮಾತ್ರ ನೀಡುವುದಿಲ್ಲ. ಸಮಯಪಾಲನೆ, ಶಿಸ್ತು, ಪ್ರಾಮಾಣಿಕತೆ, ಸಹಾನುಭೂತಿ, ಜವಾಬ್ದಾರಿ, ಪರಿಶ್ರಮ ಮತ್ತು ಮಾನವೀಯತೆ ಮುಂತಾದ ಮೌಲ್ಯಗಳನ್ನು ಬೆಳೆಸುತ್ತಾರೆ. ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವುದಕ್ಕಿಂತಲೂ ಉತ್ತಮ ಮನುಷ್ಯನಾಗಿ ಬದುಕುವುದು ಮುಖ್ಯ ಎಂಬುದನ್ನು ಶಿಕ್ಷಕರು ತಮ್ಮ ನಡೆ–ನುಡಿಯ ಮೂಲಕ ಕಲಿಸುತ್ತಾರೆ.

ಒಬ್ಬ ವಿದ್ಯಾರ್ಥಿಯಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅದನ್ನು ಬೆಳೆಸಲು ಪ್ರೋತ್ಸಾಹಿಸುವ ಶಕ್ತಿ ಶಿಕ್ಷಕರಲ್ಲಿದೆ. ಕೆಲವೊಮ್ಮೆ ಕುಟುಂಬದ ನಂತರ ವಿದ್ಯಾರ್ಥಿಯ ಮನಸ್ಸನ್ನು ಅರ್ಥಮಾಡಿಕೊಳ್ಳುವ ವ್ಯಕ್ತಿಯೂ ಶಿಕ್ಷಕರೇ ಆಗಿರುತ್ತಾರೆ. ಒಂದು ಸಣ್ಣ ಪ್ರೋತ್ಸಾಹದ ಮಾತು ವಿದ್ಯಾರ್ಥಿಯ ಆತ್ಮವಿಶ್ವಾಸವನ್ನು ಹೆಚ್ಚಿಸಬಹುದು; ಒಂದು ಉತ್ತಮ ಸಲಹೆ ಅವನ ಬದುಕಿನ ದಿಕ್ಕನ್ನೇ ಬದಲಿಸಬಹುದು.

ಅದರಂತೆಯೇ ಸಹಕಾರ ಕ್ಷೇತ್ರದಲ್ಲಿ ಶಿಕ್ಷಣವು ಸಹಕಾರ ಚಳವಳಿಯ ಬಲವರ್ಧನೆಗೆ ಅತ್ಯಂತ ಪ್ರಮುಖವಾದ ಅಂಶವಾಗಿದೆ. ಸಹಕಾರಿ ಸಂಸ್ಥೆಗಳ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗೆ ಸಹಕಾರದ ತತ್ವಗಳು, ಕಾನೂನು, ಹಣಕಾಸು ನಿರ್ವಹಣೆ, ಉತ್ತಮ ಆಡಳಿತ, ಪಾರದರ್ಶಕತೆ, ತಂತ್ರಜ್ಞಾನ ಬಳಕೆ ಮತ್ತು ತಮ್ಮ ಹಕ್ಕು ಕರ್ತವ್ಯಗಳ ಕುರಿತು ನಿರಂತರ ಶಿಕ್ಷಣ ಹಾಗೂ ತರಬೇತಿ ನೀಡುವುದು ಅಗತ್ಯ. ಜ್ಞಾನವುಳ್ಳ ಸದಸ್ಯರು ಸಂಸ್ಥೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸರಿಯಾದ ನಿರ್ಧಾರಗಳನ್ನು ಕೈಗೊಳ್ಳಲು ನೆರವಾಗುತ್ತಾರೆ. ಅದೇ ರೀತಿ ತರಬೇತಿ ಪಡೆದ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಸಂಸ್ಥೆಯನ್ನು ಸಮರ್ಥವಾಗಿ ಮುನ್ನಡೆಸಲು ಸಾಧ್ಯವಾಗುತ್ತದೆ. ಇಂದಿನ ಡಿಜಿಟಲ್ ಯುಗದಲ್ಲಿ ಸೈಬರ್ ಸುರಕ್ಷತೆ, ಡಿಜಿಟಲ್ ವಹಿವಾಟು ಹಾಗೂ ಹೊಸ ತಂತ್ರಜ್ಞಾನಗಳ ಕುರಿತು ಶಿಕ್ಷಣವೂ ಅಗತ್ಯವಾಗಿದೆ. ಹೀಗಾಗಿ “ಶಿಕ್ಷಣವೇ ಸಹಕಾರದ ಶಕ್ತಿ, ತರಬೇತಿಯೇ ಸಹಕಾರದ ಪ್ರಗತಿಯ ದಾರಿ” ಎಂಬಂತೆ, ನಿರಂತರ ಶಿಕ್ಷಣ ಮತ್ತು ಸಾಮರ್ಥ್ಯವರ್ಧನೆಯ ಮೂಲಕವೇ ಸಹಕಾರಿ ಸಂಸ್ಥೆಗಳನ್ನು ಬಲಿಷ್ಠ, ಪಾರದರ್ಶಕ ಹಾಗೂ ಜನಪರ ಸಂಸ್ಥೆಗಳನ್ನಾಗಿ ರೂಪಿಸಬಹುದು.

### ಬದಲಾಗುತ್ತಿರುವ ಕಾಲದಲ್ಲಿ ಶಿಕ್ಷಕರ ಪಾತ್ರ

ಇಂದಿನ ಜಗತ್ತು ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯ ವೇಗದ ಬೆಳವಣಿಗೆಯಿಂದ ಹೊಸ ರೂಪ ಪಡೆಯುತ್ತಿದೆ. ವಿದ್ಯಾರ್ಥಿಗಳಿಗೆ ಮಾಹಿತಿ ದೊರೆಯುವುದು ಈಗ ಕಷ್ಟದ ವಿಷಯವಲ್ಲ. ಆದರೆ ದೊರೆತ ಮಾಹಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು, ಸತ್ಯಾಸತ್ಯತೆಯನ್ನು ಪರಿಶೀಲಿಸುವುದು, ವಿವೇಚನೆಯಿಂದ ಬಳಸುವುದು ಮತ್ತು ಮಾನವೀಯ ಮೌಲ್ಯಗಳೊಂದಿಗೆ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಮುಖ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಶಿಕ್ಷಕರ ಪಾತ್ರ ಇನ್ನಷ್ಟು ಮಹತ್ವ ಪಡೆದಿದೆ. ತಂತ್ರಜ್ಞಾನವನ್ನು ಬಳಸಿಕೊಂಡು ಹೊಸ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ, ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಚಿಂತನಾ ಶಕ್ತಿ, ನೈತಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವ ಕಾರ್ಯ ಶಿಕ್ಷಕರ ಮುಂದಿದೆ. ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕರ

ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ರಾಷ್ಟ್ರಪತಿ ಭವನದ ಸಂದೇಶಗಳಲ್ಲಿಯೂ ಒತ್ತಿಹೇಳಲಾಗಿದೆ.

ಶಿಕ್ಷಕರಿಗೆ ಗೌರವ  ಒಂದು ದಿನಕ್ಕೆ ಸೀಮಿತವಾಗದಿರಲಿ

ಶಿಕ್ಷಕರ ದಿನದಂದು ಹೂವು, ಶುಭಾಶಯ, ಸನ್ಮಾನ ಹಾಗೂ ಉಡುಗೊರೆಗಳನ್ನು ನೀಡುವುದು ಗೌರವದ ಸಂಕೇತ. ಆದರೆ ಶಿಕ್ಷಕರಿಗೆ ನಿಜವಾದ ಗೌರವವೆಂದರೆ ಅವರು ಕಲಿಸಿದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು. ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬದುಕುವುದು ಮತ್ತು ಇತರರಿಗೆ ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳುವುದೇ ಶಿಕ್ಷಕರಿಗೆ ಸಲ್ಲಿಸುವ ಶ್ರೇಷ್ಠ ಗೌರವ.

ಶಿಕ್ಷಕರ ಸೇವೆಯನ್ನು ಕೇವಲ ತರಗತಿಯ ನಾಲ್ಕು ಗೋಡೆಗಳೊಳಗೆ ಸೀಮಿತಗೊಳಿಸಲಾಗದು. ಅವರು ರಾಷ್ಟ್ರದ ಜ್ಞಾನಸಂಪತ್ತನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವ ಸೇತುವೆಗಳಾಗಿದ್ದಾರೆ. ಅವರ ಮಾರ್ಗದರ್ಶನದಿಂದ ರೂಪುಗೊಳ್ಳುವ ವಿದ್ಯಾರ್ಥಿಗಳೇ ನಾಳೆಯ ವಿಜ್ಞಾನಿಗಳು, ವೈದ್ಯರು, ಶಿಕ್ಷಕರು, ಆಡಳಿತಗಾರರು, ಉದ್ಯಮಿಗಳು, ಕಲಾವಿದರು ಮತ್ತು ಸಮಾಜದ ಜವಾಬ್ದಾರಿಯುತ ನಾಗರಿಕರಾಗುತ್ತಾರೆ.

**ಗುರುವಿನ ಋಣ**

ತಾಯಿಯು ಜೀವನ ನೀಡಿದರೆ, ಗುರುವು ಆ ಜೀವನಕ್ಕೆ ದಿಕ್ಕು ನೀಡುತ್ತಾರೆ ಎಂಬ ಮಾತಿದೆ. ಜೀವನದಲ್ಲಿ ಯಶಸ್ಸಿನ ಶಿಖರ ತಲುಪಿದ ಅನೇಕರು ತಮ್ಮ ಸಾಧನೆಯ ಹಿಂದೆ ಶಿಕ್ಷಕರ ಮಾರ್ಗದರ್ಶನ ಮತ್ತು ಪ್ರೋತ್ಸಾಹವಿತ್ತು ಎಂದು ಸ್ಮರಿಸುತ್ತಾರೆ. ಆದ್ದರಿಂದ ಗುರುವಿನ ಋಣವನ್ನು ಯಾವುದೇ ಪ್ರಮಾಣದಲ್ಲಿ ಅಳೆಯಲು ಸಾಧ್ಯವಿಲ್ಲ.

ಶಿಕ್ಷಕರ ದಿನವು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ದಾರಿ ತೋರಿದ ಗುರುಗಳನ್ನು ನೆನಪಿಸಿಕೊಳ್ಳುವ ದಿನವಾಗಲಿ. ಅವರ ಜ್ಞಾನಕ್ಕೆ ಕೃತಜ್ಞತೆ ಸಲ್ಲಿಸುವ ದಿನವಾಗಲಿ. ಶಿಕ್ಷಕರಿಗೆ ಗೌರವ ನೀಡುವುದರ ಜೊತೆಗೆ, ಶಿಕ್ಷಣದ ಮೌಲ್ಯವನ್ನು ಸಮಾಜದಲ್ಲಿ ಮತ್ತಷ್ಟು ಎತ್ತಿಹಿಡಿಯುವ ಸಂಕಲ್ಪದ ದಿನವಾಗಲಿ.

ಶಿಕ್ಷಕರು ಕೇವಲ ಪಾಠ ಹೇಳುವವರು ಅಲ್ಲ; ಅವರು ಭವಿಷ್ಯ ರೂಪಿಸುವ ಶಿಲ್ಪಿಗಳು. ಅವರ ಕೈಯಲ್ಲಿ ವಿದ್ಯಾರ್ಥಿಗಳ ಭವಿಷ್ಯವಷ್ಟೇ ಅಲ್ಲ, ರಾಷ್ಟ್ರದ ಭವಿಷ್ಯವೂ ರೂಪುಗೊಳ್ಳುತ್ತದೆ.

ಈ ಶಿಕ್ಷಕರ ದಿನದಂದು ಜ್ಞಾನ, ಮೌಲ್ಯ ಮತ್ತು ಮಾನವೀಯತೆಯ ಬೆಳಕನ್ನು ಸಮಾಜಕ್ಕೆ ಹಂಚುತ್ತಿರುವ ಪ್ರತಿಯೊಬ್ಬ ಶಿಕ್ಷಕರಿಗೂ ಹೃತ್ಪೂರ್ವಕ ನಮನಗಳು.

"ಗುರುವಿನ ಜ್ಞಾನವೇ ಬದುಕಿನ ಬೆಳಕು; ಗುರುವಿನ ಮಾರ್ಗದರ್ಶನವೇ ಯಶಸ್ಸಿನ ದಾರಿ."

## ವಾರ್ಷಿಕ ಸಾಮಾನ್ಯ ಸಭೆ



**ದಕ್ಷಿಣ ಕನ್ನಡ :** ದಿನಾಂಕ 30.08.2026 ರಂದು ಜಯ ಭಾರತ ಸೌಹಾರ್ದ ಸಹಕಾರಿ ಸಂಘ ನಿ., ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರದ ಶ್ರೀಮತಿ ಭಾರತಿ ಜಿ. ಭಟ್ ರವರು ಭಾಗವಹಿಸಿದರು. ಈ ಸಂದರ್ಭದಲ್ಲಿ ಶ್ರೀ ನಂದನ್ ಬಿ.ಎನ್. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಿ ಸದಸ್ಯರ ಹಾಗೂ ನಿರ್ದೇಶಕರ ಹಕ್ಕು ಮತ್ತು ಕರ್ತವ್ಯಗಳು, ಸಂಯುಕ್ತ ಸಹಕಾರಿಯ ಪರಿಚಯ, ಕಾಯ್ದೆಯ ಮಹತ್ವ ಹಾಗೂ ಇತ್ತೀಚಿನ ತಿದ್ದುಪಡಿ ಅಂಶಗಳ ಕುರಿತು ಸಂಕ್ಷಿಪ್ತ ಮಾಹಿತಿ ನೀಡಲಾಯಿತು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿ**



ಶ್ರೀ. ಅಶೋಕ ಚಿಂತಪ್ಪಾ ಚೌಗಲಾ
ಅಧ್ಯಕ್ಷರು



ಶ್ರೀ. ಬಸವರಾಜ ಸತಿಗೌಡ ಪಾಟೀಲ
ಉಪಾಧ್ಯಕ್ಷರು



**ಮುಧೋಳ :** ವಿಶ್ವ ಗುರು ಬಸವ ಸೌಹಾರ್ದ ಪತ್ತಿನ ಸಹಕಾರಿ ನಿ., ನಿ. ಮುಧೋಳ ಇದರ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 31/07/2036 ಬ್ಯಾಂಕಿನ ಸಭಾಭವನದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿಗಳು ಜರುಗಿಸುವ ಸಾಮಾನ್ಯ ಸಭೆಯ ಮಹತ್ವ ಮತ್ತು ವಿಧಾನ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಹಿರಿಯ ಅಧಿಕಾರಿ, ಶಾಸನಾತ್ಮಕ ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

**ಸಹಕಾರ ಸಂಘದ ಸಾಮಾನ್ಯ ಸಭೆಯ ಅರ್ಥ:**

ಸಹಕಾರ ಸಂಘದ ಸಾಮಾನ್ಯ ಸಭೆ ಎನ್ನುವುದು ಸಂಘದ ಎಲ್ಲಾ ಅರ್ಹ ನೋಂದಾಯಿತ ಸದಸ್ಯರನ್ನು ಒಳಗೊಂಡ ಅತ್ಯುನ್ನತ ಮತ್ತು ಸರ್ವೋಚ್ಚ ಅಧಿಕಾರ ಹೊಂದಿರುವ ಸಭೆಯಾಗಿದೆ. ಕಾಯ್ದೆಯ ಅಡಿಯಲ್ಲಿ ಪ್ರಜಾಪ್ರಭುತ್ವದ ತತ್ವಗಳ ಆಧಾರದ ಮೇಲೆ ಸಹಕಾರಿಯನ್ನು ಮುನ್ನಡಿಸಲು ಸಾಮಾನ್ಯ ಸಭೆಯು ಅತ್ಯಗತ್ಯವಾಗಿದೆ. ಸಹಕಾರಿಗಳಲ್ಲಿ ಆಡಳಿತ ಮಂಡಳಿಯು ಕೇವಲ ದೈನಂದಿನ ಕೆಲಸಗಳನ್ನು ಮಾತ್ರ ನೋಡಿಕೊಳ್ಳುತ್ತದೆ. ಆದರೆ ಸಂಘದ ನಿಜವಾದ ಮಾಲೀಕರು ಅದರ ಸಾಮಾನ್ಯ ಸದಸ್ಯರು. ಈ ಎಲ್ಲಾ ಸದಸ್ಯರು ಒಟ್ಟಾಗಿ ಸೇರಿ ಸಂಘದ ಪ್ರಗತಿ, ಹಣಕಾಸಿನ ಸ್ಥಿತಿ ಮತ್ತು ಮುಂದಿನ ಯೋಜನೆಗಳ ಬಗ್ಗೆ ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕೃತ ಸಭೆಯನ್ನು "ಸಾಮಾನ್ಯ ಸಭೆ", ಸಾಮಾನ್ಯ ನಿಕಾಯ ಹಾಗೂ ಜನರಲ್ ಬಾಡಿ ಎಂದು ಸಹ ಕರೆಯಲಾಗುತ್ತದೆ.

**ಸಾಮಾನ್ಯ ಸಭೆಯ ಮಹತ್ವ :**

ಸಹಕಾರ ಸಂಘದ ಸಾಮಾನ್ಯ ಸಭೆಯು ಸಂಘದ ಅತ್ಯುನ್ನತ ಅಧಿಕಾರ ಕೇಂದ್ರವಾಗಿದ್ದು, ಪ್ರಜಾಪ್ರಭುತ್ವ ಮಾದರಿಯಲ್ಲಿ ಸಂಘವನ್ನು ಮುನ್ನಡೆಸಲು ಅತ್ಯಂತ ಮಹತ್ವದ್ದಾಗಿದೆ.

1. **ಪ್ರಜಾಪ್ರಭುತ್ವದ ರಕ್ಷಣೆ :** ಸಹಕಾರ ಸಂಘಗಳು "ಒಬ್ಬ ಸದಸ್ಯನಿಗೆ ಒಂದು ಮತ" ತತ್ವದಡಿ ಕೆಲಸ ಮಾಡುತ್ತವೆ. ಈ ಸಭೆಯು ಬಡವ–ಶ್ರೀಮಂತ ಎಂಬ ಭೇದವಿಲ್ಲದೆ, ಪ್ರತಿಯೊಬ್ಬ ಸದಸ್ಯನಿಗೂ ಸಂಘದ ನಿರ್ಧಾರಗಳಲ್ಲಿ ಸಮಾನ ಧ್ವನಿ, ಸಮಾನ ಅವಕಾಶ ಮತ್ತು ಹಕ್ಕನ್ನು ನೀಡುತ್ತದೆ.
2. **ಆಡಳಿತ ಮಂಡಳಿಯ ಮೇಲಿನ ನಿಯಂತ್ರಣ :** ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳುವ ಆಡಳಿತ ಮಂಡಳಿಯ ಕಾರ್ಯವೈಖರಿಯನ್ನು ಪರಿಶೀಲಿಸಲು ಮತ್ತು ಅವರು ತಪ್ಪು ಮಾಡಿದರೆ ಪ್ರಶ್ನಿಸಲು ಸದಸ್ಯರಿಗೆ ಇದು ಏಕೈಕ ವೇದಿಕೆಯಾಗಿದೆ.
3. **ಹಣಕಾಸಿನ ಪಾರದರ್ಶಕತೆ :** ಸಂಘದ ಕಳೆದ ವರ್ಷದ ಆಯವ್ಯಯ, ಲಾಭ–ನಷ್ಟದ ಲೆಕ್ಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಇಲ್ಲಿ ಮಂಡಿಸಿ ಒಪ್ಪಿಗೆ ಪಡೆಯಬೇಕು. ಇದರಿಂದಾಗಿ ಸಂಘದ ಹಣ–ಕಾಸು ವ್ಯವಹಾರಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.
4. **ಪ್ರಶ್ನಿಸುವ ಮತ್ತು ತಿದ್ದುವ ಹಕ್ಕು :** ಸಂಘದ ನಷ್ಟಕ್ಕೆ ಕಾರಣಗಳೇನು? ಸಾಲ ವಸೂಲಾತಿ ಏಕೆ ಆಗಿಲ್ಲ? ಯಾರು ನಿಯಮ ಉಲ್ಲಂಘಿ–ಸಿದ್ದಾರೆ? ಇಂತಹ ಕಠಿಣ ಪ್ರಶ್ನೆಗಳನ್ನು ಕೇಳಲು ಸದಸ್ಯರಿಗೆ ಮುಕ್ತ ಅವಕಾಶವಿರುತ್ತದೆ.
5. **ಸದಸ್ಯರ ದೂರು ಮತ್ತು ಸಲಹೆಗಳಿಗೆ ವೇದಿಕೆ :** ಸಂಘದ ಸೇವೆಗಳ ಬಗ್ಗೆ ಸಾಮಾನ್ಯ ಸದಸ್ಯರಿಗಿರುವ ಸಮಸ್ಯೆಗಳು, ದೂರುಗಳು ಮತ್ತು ಸಂಘದ ಪ್ರಗತಿಗೆ ಬೇಕಾದ ಪ್ರಮುಖ ಸಲಹೆಗಳನ್ನು ಮುಕ್ತವಾಗಿ ಚರ್ಚಿಸಲು ಇದು ಅವಕಾಶ ಮಾಡಿಕೊಡುತ್ತದೆ.

**ಸಹಕಾರಿಗಳು ಸಾಮಾನ್ಯ ಸಭೆಗಳನ್ನು ಜರುಗಿಸುವುದರಿಂದ ಆಗುವ ಲಾಭಗಳು :**

1. **ಕಾನೂನು ರಕ್ಷಣೆ:** ಕಡ್ಡಾಯವಾಗಿ ಸಭೆ ನಡೆಸುವುದರಿಂದ ಸಹಕಾರ ಇಲಾಖೆಯ ನೋಟಿಸ್, ದಂಡ ಅಥವಾ ಆಡಳಿತ ಮಂಡಳಿ ವಿಸರ್ಜನೆಯಾಗುವ ಕಾನೂನಾತ್ಮಕ ಅಪಾಯದಿಂದ ಸಂಘವು ಪಾರಾಗುತ್ತದೆ.
2. **ವಿಶ್ವಾಸಾರ್ಹತೆ ಹೆಚ್ಚಳ:** ಸಂಘದ ಆರ್ಥಿಕ ಸ್ಥಿತಿ ಮತ್ತು ಲಾಭ–ನಷ್ಟದ ವಿವರಗಳು ಮುಕ್ತವಾಗಿ ಚರ್ಚೆಯಾಗುವುದರಿಂದ ಸದಸ್ಯರಿಗೆ ಸಂಘದ ಮೇಲೆ ನಂಬಿಕೆ ಮತ್ತು ವಿಶ್ವಾಸ ಹೆಚ್ಚುತ್ತದೆ.
3. **ಸದಸ್ಯರಿಗೆ ಲಾಭಾಂಶ:** ಸಂಘ ಗಳಿಸಿದ ಲಾಭದಲ್ಲಿ ಸದಸ್ಯರಿಗೆ ಸಿಗಬೇಕಾದ ಡಿವಿಡೆಂಡ್ ಮೊತ್ತವನ್ನು ಸಭೆಯಲ್ಲೇ ಅನುಮೋದಿಸಿ, ವಿತರಿಸಲು ಕ್ರಮ ಕೈಗೊಳ್ಳಲಾಗುತ್ತದೆ.
4. **ಸಮೂಹ ನಿರ್ಧಾರಗಳು:** ಯಾವುದೇ ಒಬ್ಬ ವ್ಯಕ್ತಿಯ ಸ್ವಯಂ ತೀರ್ಮಾನಕ್ಕೆ ಅವಕಾಶವಿರದೆ, ಸಂಘದ ಒಳಿತಿಗಾಗಿ ಎಲ್ಲ ಸದಸ್ಯರ ಒಮ್ಮತದ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು.
5. **ಆಡಳಿತ ಮಂಡಳಿಯ ನಿಯಂತ್ರಣ:** ಆಡಳಿತ ಮಂಡಳಿಯು ತಪ್ಪು ಹಾದಿ ತುಳಿಯದಂತೆ ಮತ್ತು ಹಣಕಾಸಿನ ದುರುಪಯೋಗ ಮಾಡದಂತೆ ತಡೆಯಲು ಸದಸ್ಯರಿಗೆ ಈ ಸಭೆ ದೊಡ್ಡ ಅಸ್ತ್ರವಾಗಿದೆ

**ಸಾಮಾನ್ಯ ಸಭೆ ಜರುಗಿಸುವುದರಿಂದಾಗುವ ನಷ್ಟಗಳು:**

1. **ಹೆಚ್ಚಿನ ಆರ್ಥಿಕ ವೆಚ್ಚ:** ಸಭೆ ನಡೆಸಲು ಎಲ್ಲಾ ಸದಸ್ಯರಿಗೆ ನೋಟಿಸ್ ಕಳುಹಿಸುವುದು (ಅಂಚೆ ವೆಚ್ಚ), ಸಭಾಂಗಣದ ಬಾಡಿಗೆ, ಮೈಕ್ ವ್ಯವಸ್ಥೆ ಮತ್ತು ಸಭೆಗೆ ಬರುವ ಸದಸ್ಯರಿಗೆ ಊಟ ಅಥವಾ ಉಪಹಾರದ ವ್ಯವಸ್ಥೆ ಮಾಡಲು ದೊಡ್ಡ ಮೊತ್ತದ ಹಣ ಖರ್ಚಾಗುತ್ತದೆ.
2. **ಸಮಯದ ನಷ್ಟ:** ನೂರಾರು ಅಥವಾ ಸಾವಿರಾರು ಸದಸ್ಯರಿರುವ ಸಂಘಗಳಲ್ಲಿ ಎಲ್ಲರನ್ನೂ ಒಟ್ಟುಗೂಡಿಸಿ ಸಭೆ ನಡೆಸಿ, ನಿರ್ಣಯ ಕೈಗೊಳ್ಳಲು ಸುದೀರ್ಘ ಸಮಯ ಬೇಕಾಗುತ್ತದೆ.
3. **ರಾಜಕೀಯ ಮತ್ತು ಗೊಂದಲಗಳು:** ಕೆಲವೊಮ್ಮೆ ಸಭೆಯು ವೈಯಕ್ತಿಕ ದ್ವೇಷ ಅಥವಾ ರಾಜಕೀಯ ಪ್ರಭಾವಕ್ಕೆ ಒಳಗಾಗಿ, ಮೂಲ

ಉದ್ದೇಶದ ಚರ್ಚೆ ಬಿಟ್ಟು ಅನಗತ್ಯ ಗಲಾಟೆ, ಗದ್ದಲಗಳಿಗೆ ಕಾರಣವಾಗಿ ಸಭೆ ಅಪೂರ್ಣಗೊಳ್ಳಬಹುದು.

4. **ಕೋರಂ ಕೊರತೆಯ ಅಪಾಯ:** ನಿಗದಿತ ಸಂಖ್ಯೆಯ ಸದಸ್ಯರು (Quorum) ಸಭೆಗೆ ಹಾಜರಾಗದಿದ್ದರೆ ಸಭೆಯನ್ನು ಮುಂದೂಡಬೇಕಾಗುತ್ತದೆ. ಇದರಿಂದ ಸಭೆಯ ಸಿದ್ಧತೆಗಾಗಿ ಮಾಡಿದ ಖರ್ಚು ಮತ್ತು ಶ್ರಮ ವ್ಯರ್ಥವಾಗುತ್ತದೆ.

ಸರಿಯಾಗಿ ಯೋಜಿಸಿ, ಶಿಸ್ತಿನಿಂದ ನಡೆಸಿದರೆ ಸಾಮಾನ್ಯ ಸಭೆಯಿಂದ ಆಗುವ ನಷ್ಟಗಳಿಗಿಂತ ಸಂಘದ ಬೆಳವಣಿಗೆಗೆ ಆಗುವ ಲಾಭಗಳೇ ಹೆಚ್ಚಾಗಿವೆ.

**ಸೌಹಾರ್ದ ಸಹಕಾರಿಗಳಲ್ಲಿ ಸಾಮಾನ್ಯ ಸಭೆ :**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ–30(1) ರಂತೆ ಒಂದು ಸಹಕಾರಿ ಪ್ರತಿ ವರ್ಷದ ಸೆಪ್ಟೆಂಬರ ತಿಂಗಳ ಇಪ್ಪತ್ತೈದರೊಳಗಾಗಿ, ಕಾಯ್ದೆ ಕಲಂ–23ನೇ ಪ್ರಕರಣದ (3) ನೇ ಉಪಪ್ರಕರಣದಲ್ಲಿ ಉಕ್ತವಾಗಿರುವ ಕಾರ್ಯಕಲಾಪಗಳನ್ನು ನಿರ್ವಹಿಸಲು, ಒಂದು ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.

ಪ್ರತಿವರ್ಷ ಸೆಪ್ಟೆಂಬರ 25 ರೊಳಗೆ ಜರುಗಿಸುವ ಸಾಮಾನ್ಯ ಸಭೆ ಕಾಯ್ದೆಯಂತೆ ಕಡ್ಡಾಯವಾಗಿದ್ದರೆ ಇದನ್ನು ಹೊರತುಪಡಿಸಿ ಸಹಕಾರಿಯ ಬೆಳವಣಿಗೆಗೆ ಪೂರಕವಾಗಿ ಸೇರಿದಂತೆ ಇತರೆ ಕಾರಣಗಳಿಗಾಗಿ ಸಾಮಾನ್ಯ ಸಭೆಯನ್ನು ಸೌಹಾರ್ದ ಸಹಕಾರಿಗಳಲ್ಲಿ ಈ ಕೆಳಗಿನಂತೆ ಜರುಗಿಸಲಾಗುತ್ತಿದೆ.

1. **ಪ್ರಥಮ ಸಾಮಾನ್ಯ ಸಭೆ :** ಸಹಕಾರಿಯು ನೋಂದಣಿಗೊಂಡ ನಂತರ ಜರುಗಿಸಬೇಕಾದ ಪ್ರಥಮ ಸಾಮಾನ್ಯ ಸಭೆ.

2. **ವಾರ್ಷಿಕ ಸಾಮಾನ್ಯ ಸಭೆ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 30(1) ರಂತೆ ಒಂದು ಸಹಕಾರಿ

   ಪ್ರತಿ ವರ್ಷದ ಸೆಪ್ಟೆಂಬರ ತಿಂಗಳ ಇಪ್ಪತ್ತೈದರೊಳಗಾಗಿ, ಕಡ್ಡಾಯವಾಗಿ ಜರುಗಿಸಬೇಕಾದ ಸಭೆ.

3. **ಸಾಮಾನ್ಯ ಸಭೆ :** ಆಡಳಿತ ಮಂಡಳಿಯು ಸೆಪ್ಟೆಂಬರ 25 ರೊಳಗೆ ಕರೆಯುವ ವಾರ್ಷಿಕ ಸಾಮಾನ್ಯ ಸಭೆಯನ್ನು ಹೊರತುಪಡಿಸಿ 6ಸಿ(1) ರಂತೆ ಒಂದು ಸಹಕಾರಿಯ ಆಡಳಿತ ಮಂಡಳಿಯು ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಸಂದರ್ಭದಲ್ಲಿ ತನ್ನ ಸದಸ್ಯರ ಸಾಮಾನ್ಯ ಸಭೆಯನ್ನು ಕರೆಯಬಹುದು ಉದಾ: ಶಾಖೆ ಅನುಮತಿ ಪಡೆಯಲು, ಆಸ್ತಿ ಖರೀದಿ ಅಥವಾ ಕಟ್ಟಡ ಕಟ್ಟಲು ಮಂಜುರಾತಿಗಾಗಿ.

4. **ವಿಶೇಷ ಸಾಮಾನ್ಯ ಸಭೆ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ–30(2) ರಂತೆ ಸಹಕಾರಿಯ ಸದಸ್ಯರಗಳ ಪೈಕಿ ಹತ್ತನೇ ಒಂದರಷ್ಟು ಸದಸ್ಯರುಗಳಿಗೆ ಕಡಿಮೆ ಇಲ್ಲದ ಸದಸ್ಯರಿಂದ ಅಥವಾ ಉಪವಿಧಿಗಳಲ್ಲಿ ಉಪಬಂಧಿಸಲಾದಂತೆ ಕೋರಿಕೆಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗೆ ವಿಶೇಷ ಸಾಮಾನ್ಯ ಸಭೆಯನ್ನು ಮಂಡಲಿಯು ಕರೆಯತಕ್ಕದ್ದು.

5. **ಪ್ರಾತಿನಿಧಿಕ ಸಾಮಾನ್ಯ ಸಭೆ :** ನಿಯಮ 6ಎಫ್ ರಂತೆ ಪ್ರಾತಿನಿಧಿಕ ಸಾಮಾನ್ಯ ನಿಕಾಯವನುಳ್ಳ ಸಹಕಾರಿಯಲ್ಲಿ ಚುನಾವಣಾ ಪ್ರಕ್ರಿಯೆಯು ಮೊದಲ ಹಂತದಲ್ಲಿ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಚುನಾಯಿಸುವ ಸಾಮಾನ್ಯ ಚುನಾವಣೆಯನ್ನು ಒಳಗೊಂಡಿರುತ್ತದೆ. ಉದಾ: ಲಕ್ಷಾಂತರ ಸದಸ್ಯರು ಹೊಂದಿರುವ ಸಹಕಾರಿಗಳು ಈ ವ್ಯವಸ್ಥೆಯನ್ನ ಅಳವಡಿಸಿಕೊಂಡಿದ್ದಾರೆ, ಇಪ್ಕೋ ಸಹಕಾರಿಯು ಈ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ.

6. **ಅಂತಿಮ/ಸಮಾಪನಾ ಸಾಮಾನ್ಯ ಸಭೆ :** ಕಲಂ 47(1) ರಂತೆ ಒಂದು ಸಹಕಾರಿಯ ಐದನೆ ಒಂದಕ್ಕಿಂತ ಕಡಿಮೆಯಿಲ್ಲದ ಸಂಖ್ಯೆಯ ಸದಸ್ಯರು ಆ ಸಹಕಾರಿಯ ವ್ಯವಹಾರಗಳನ್ನು ಸಮಾಪನೆಗೊಳಿಸಬೇಕೆಂದು ಕೊಟ್ಟ ಅರ್ಜಿಯ ಮೇಲೆ ಮಂಡಲಿಯು, ಪ್ರತಿಯೊಬ್ಬ ಸದಸ್ಯನಿಗೂ ನೋಟಿಸ್ಸು ನೀಡುವ ಮೂಲಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.

**ಪ್ರತಿ ವರ್ಷ ಜರುಗಿಸುವ ವಾರ್ಷಿಕ ಸಾಮಾನ್ಯ ಸಭೆಯ ವಿಧಾನ:**

ಪ್ರತಿಯೊಂದು ಸೌಹಾರ್ದ ಸಹಕಾರಿಯು ಕಾಯ್ದೆ ಕಲಂ–30(1)ರಂತೆ ಸೆಪ್ಟೆಂಬರ 25 ರೊಳಗಾಗಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ಜರುಗಿಸತಕ್ಕದ್ದು. ಸಾಮಾನ್ಯ ಸಭೆಯ ಸಿದ್ದತೆ ಹಾಗೂ ಕ್ರಮಗಳ ಬಗ್ಗೆ ಈ ಕೆಳಗಿನಂತೆ ವಿವರಿಸಲಾಗಿದೆ.

- **ನೋಟೀಸ ಕಳುಹಿಸುವ ದಿನಾಂಕ :** ನಿಯಮ 6ಸಿ(2) ರಂತೆ ಆಡಳಿತ ಮಂಡಳಿಯು ಸಾಮಾನ್ಯ ಸಭೆಯ ದಿನಾಂಕ ಮತ್ತು ಸಮಯವನ್ನು ನಿರ್ಧರಿಸಿದ ನಂತರ, ಮುಖ್ಯಕಾರ್ಯನಿರ್ವಾಹಕನು ಉಪವಿಧಿಗಳ ತಿದ್ದುಪಡಿ ಸಂದರ್ಭದಲಿ ಕನಿಷ್ಠ ಇಪತ್ತು ದಿನಗಳ ಮೊದಲು ಅಥವಾ ಇತರ ಸಂದರ್ಭದಲ್ಲಿ ಕನಿಷ್ಠ ಹದಿನೈದು ಸ್ಪಷ್ಟ ದಿನಗಳ ನೋಟೀಸನು ನೀಡುವುದು. (ವಿಶೇಷ ಸಾಮಾಣ್ಯ ಸಭೆಯಲ್ಲಿ ಕನಿಷ್ಠ 10 ದಿನಗಳ ಮೊದಲು )

- **ನೋಟೀಸು ಕಳುಹಿಸುವ ವಿಧಾನ :** ಸಹಕಾರಿಯು ಸಾಮಾನ್ಯ ಸಭೆಯ ನೋಟೀಸ್ಸನ್ನು ನಿಯಮ 6ಸಿ(2) ರಂತೆ

  ಎ. ರಂತೆ ಸಾಮಾನ್ಯ ಅಂಚೆ ಅಥವಾ ಸ್ವೀಕೃತಿಯೊಂದಿಗೆ ಬಹುಪ್ರಮಾಣದ ಅಂಚೆ(ಬ್ಲಕ್ ಪೊಸ್ಟ್) ರಿಜಿಸ್ಟ್ರರ್ಡ್

  ಸ್ವೀಕೃತಿ; ಅಥವಾ

  ಬಿ. ರಂತೆ ವಿದ್ಯುನ್ಮಾನ ಅಂಚೆ(ಇ–ಮೇಲ್) ಅಥವಾ

  ಸಿ. ರಂತೆ ಸೂಕ್ತ ಸ್ವೀಕೃತಿಯೊಂದಿಗೆ ಸ್ಥಳೀಯವಾಗಿ ತಲುಪಿಸುವ ಮೂಲಕ ಮತ್ತು 6ಸಿ(2)(ii) ರಂತೆ

ಕಾರ್ಯಕ್ಷೇತ್ರದಲ್ಲಿ ಹೆಚ್ಚು ಪರಿಚಲನೆಯಲ್ಲಿರುವ ವೃತ ಪತ್ರಿಕೆಯಲ್ಲಿ

ಸಂಕ್ಷಿಪ್ತವಾಗಿ ಪ್ರಕಟಿಸುವ ಮೂಲಕ.

ಈ ಸೂಚನಾ ಪತ್ರವನ್ನು ಸಹಕಾರಿಯ ಸೂಚನಾ ಫಲಕದಲ್ಲಿಯೂ ಪ್ರದರ್ಶಿಸತಕ್ಕದ್ದು. ಎಲ್ಲಾ ಸೂಚನೆಯನ್ನು ಕಳುಹಿಸಿರುವುದಕ್ಕೆ ಸಹಕಾರಿಯಲ್ಲಿ ಸೂಕ್ತ ದಾಖಲೆ ಇದ್ದಲ್ಲಿ ಅಂತಹ ಸೂಚನೆಯನ್ನು ಎಲ್ಲಾ ಸದಸ್ಯರಿಗೂ ತಲುಪಿಸಲಾಗಿದೆ ಎಂದು ಭಾವಿಸಲಾಗುವ್ವದು.

**ಸಾಮಾನ್ಯ ಸಭೆಯ ನೋಟೀಸ್‌ನಲ್ಲಿ ಇರಬೇಕಾದ ಅಂಶಗಳು :**

ಸಾಮಾನ್ಯ ಸಭೆಯ ನೋಟೀಸಿನಲ್ಲಿ ಸಭೆಯ ಸ್ಥಳ, ದಿನಾಂಕ, ಸಮಯ ಮತ್ತು ಅಜೆಂಡಾಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಕಾಯ್ದೆ ಕಲಂ–23(3) ರಂತೆ ನೋಟಿಸಿನಲ್ಲಿ ಈ ಕೆಳಕಂಡ ವಿಷಯಗಳನ್ನು ಇಡತಕ್ಕದ್ದು.

ಎ. ಮಂಡಲಿಯು ಸಲ್ಲಿಸಿದ ಹಿಂದಿನ ಸಹಕಾರ ವರ್ಷದ ವಾರ್ಷಿಕ ವರದಿಯ ಪರಿಗಣನೆ.

ಬಿ. ಚಾಲ್ತಿ ವರ್ಷದ ಲೆಕ್ಕಪತ್ರಗಳ ಪರಿಶೋಧನೆಗಾಗಿ ಲೆಕ್ಕಪರಿಶೋಧಕ ಮತ್ತು ಆಂತರಿಕ ಲೆಕ್ಕಪರಿಶೋಧಕನ ನೇಮಕ ಮತ್ತು ತೆಗೆದು ಹಾಕುವಿಕೆ.

ಸಿ. ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯ ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಖ್ತೆಗಳ ಪರಿಗಣನೆ.

ಡಿ. ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ತೋರಿಸಲಾದ ದೋಷಗಳನ್ನು ಮತ್ತು ಅಕ್ರಮಗಳನ್ನು ಸರಿಪಡಿಸುವ ಸಂಬಂಧದಲ್ಲಿ ಮಂಡಲಿಯು ಸಲ್ಲಿಸಿದ ಪಾಲನಾ ವರದಿಯ ಪರಿಗಣನೆ ಹಾಗೂ ತೀರ್ಮಾನ.

ಇ. ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.

ಎಫ್. ಕಾರ್ಯಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.

ಜೆ. ದೀರ್ಘಾವಧಿ ಯಥಾದೃಷ್ಟ ಯೋಜನೆ ಮತ್ತು ವಾರ್ಷಿಕ ಕಾರ್ಯಚರಣೆ ಯೋಜನೆಯ ಅನುಮೋದನೆ.

ಹೆಚ್. ಮುಂದಿನ ಸಹಕಾರ ವರ್ಷದ ವಾರ್ಷಿಕ ಬಜೆಟ್ಟಿನ ಅನುಮೋದನೆ.

ಐ . ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.

ಜೆ. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ.

ಕೆ. ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.

ಕೆ–1. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ, ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ

ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಳಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.

ಕೆ–2. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.

ಕೆ–3. ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ.

ಎಲ್. ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.

ಎಂ. 37ನೇ ಪ್ರಕರಣದ ಅಡಿಯಲ್ಲಿ ವಿಚಾರನಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.

ಎನ್. ಒಂದು ಸಹಕಾರಿಯು ಇತರ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ.

ಒ. 14,15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ.

ಪಿ. ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.

ಕ್ಯೂ. ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.

ಆರ್. ಉಪವಿಧಿಗಳ ತಿದ್ದುಪಡಿ.

ಎಸ್. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆ ರಚನೆ.

ಟಿ. ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದುಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.

ಯು. ಸಹಕಾರಿಯ ಸಮಾಪನ; ಮತ್ತು

ವಿ. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂತ ಇತರ ಪ್ರಕ್ರಿಯೆಗಳು.

**ಸಭೆಯ ಕೋರಂ :**

- ಯಾವುದೇ ಸಾಮಾನ್ಯ ಸಭೆಯ ಕೋರಂ ಸಾಮಾನ್ಯ ಸಭೆಯ ಒಟ್ಟು ಮತದಾನದ ಹಕ್ಕುಳ್ಳ ಸದಸ್ಯರ ಶೇಕಡಾ ಹತ್ತು ಅಥವಾ ಒಂದು ಸಾವಿರ, ಇವೆರಡರಲ್ಲಿ ಯಾವುದು ಕಡಿಮೇಯೋ ಅದಾಗಿರತಕ್ಕದ್ದು.
- ಯಾವುದೇ ಸಾಮಾನ್ಯ ಸಭೆಯಲ್ಲಿ ಯಾವುದೇ ಕಲಾಪವನ್ನು ನಿರ್ವಹಿಸುವ ಸಮಯದಲ್ಲಿ ಕೋರಂ ಇಲ್ಲದ ಪಕ್ಷದಲ್ಲಿ ಅಂಥ ಕಲಾಪವನ್ನು ನಡೆಸತಕ್ಕದ್ದಲ್ಲ.

- ಸಭೆಗೆ ಗೊತ್ತುಪಡಿಸಿದ ಸಮಯದಿಂದ ಒಂದು ಗಂಟೆಯೊಳಗೆ ಕೋರಂ ಇಲ್ಲದ ಪಕ್ಷದಲ್ಲಿ ಅಂಥ ಸಭೆಯನ್ನು ಮುಂದೂಡತಕ್ಕದ್ದು ಹಾಗೂ ಮುಂದೂಡಲ್ಪಟ್ಟ ಸಭೆಗೂ ಕೋರಂ ಅವಶ್ಯಕವಾಗಿದೆ.
- ಸಭೆಯ ಅಧ್ಯಕ್ಷತೆ : ಸಹಕಾರಿಯ ಸಾಮಾನ್ಯ ಸಭೆಯ ಅಧ್ಯಕ್ಷತೆ ಸಹಕಾರಿಯ ಅಧ್ಯಕ್ಷರು ವಹಿಸತಕ್ಕದ್ದು. ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ಸಾಮಾನ್ಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಉಪಾಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಹಾಜರಿದ್ದ ನಿರ್ದೇಶಕರಿಂದ ಚುನಾಯಿತನಾದ ಆಡಳಿತ ಮಂಡಳಿ ಇತರ ಸದಸ್ಯನೊಬ್ಬನು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

### ಸಭಾ ನಡವಳಿಕೆ ಮತ್ತು ನಿರ್ಣಯಗಳ ದಾಖಲಾತಿ

- ಸಭಾ ನಡುವಳಿಕೆ ಮತ್ತು ನಿರ್ಣಯಗಳ ದಾಖಲಾತಿಯು ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಜವಾಬ್ದಾರಿ.
- ನಡುವಳಿ ಪುಸ್ತಕ ಪ್ರತ್ಯೇಕ ಇರಬೇಕು.
- ಸತ್ಯವಾಗಿ ಮತ್ತು ಸರಿಯಾದ ರೀತಿಯಲ್ಲಿ ದಾಖಲಿಸಬೇಕು.
- ನಡುವಳಿಯ ಕೊನೆಯಲ್ಲಿ ಸಭಾಧ್ಯಕರ ಸಹಿ, ಮುಖ್ಯಕಾರ್ಯನಿರ್ವಹಣಾಧಿಕಾರಿಯ ಸಹಿ ಮಾಡಿಸಬೇಕು.
- ನಡುವಳಿಯ ಪ್ರತಿ ಪುಟಕ್ಕೆ ಅಧ್ಯಕ್ಷ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಯ ಚಿಕ್ಕ ಸಹಿ ಮಾಡಬೇಕು. ಇದು ನಡವಳಿಕೆಗಳ ಸತ್ಯತೆ/ಸಮರ್ಪಕತೆ ಬಗ್ಗೆ ಅಂತಿಮ ಸಾಕ್ಷಿ ಆಗಿರುತ್ತದೆ.
- ಯಾವುದೇ ನಿರ್ದೇಶಕ/ಸದಸ್ಯರು ನಿರ್ಣಯಕ್ಕೆ ವ್ಯತಿರಿಕ್ತವಾಗಿ ಅಭಿಪ್ರಾಯ/ವಿರೋಧ ವ್ಯಕ್ತಪಡಿಸಿದರೆ ಅದನ್ನು ಯಥಾವತ್ ನಡವಳಿಕೆಗಳಲ್ಲಿ ದಾಖಲಿಸಬೇಕು.
- ವಿಷಯ ಪಟ್ಟಿಯ ಹೊರತಾದ ವಿಷಯಗಳ ಬಗ್ಗೆ ಸಭೆಯ ನಿರ್ಣಯ ಸ್ವೀಕರಿಸಬಾರದು.
- ಯಾವುದೇ ಕಾಯಿದೆ, ನಿಯಮ ಮತ್ತು ಬೈಲಾಗಳ ವಿರುದ್ಧವಾದ ನಿರ್ಣಯಗಳನ್ನು ಸ್ವೀಕರಿಸಬಾರದು. ಇಂಥ ಸಂದರ್ಭಗಳಲ್ಲಿ ಅಥವಾ ಸಂಸ್ಥೆಯ ಹಿತಾಸಕ್ತಿಗೆ ವಿರುದ್ಧವಾದ ನಿರ್ಣಯ ಸ್ವೀಕರಿಸಿದ್ದಲ್ಲಿ ಭಾಗವಹಿಸಿದ ಸದಸ್ಯರೆಲ್ಲರೂ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಹೊಣೆಗಾರರಾಗಿರುತ್ತಾರೆ.
- ನಡವಳಿಕೆಗಳ ಪ್ರಾರಂಭದಲ್ಲಿ ಸಭೆಯ ಸ್ಥಳ, ದಿನಾಂಕ, ವೇಳೆ, ಸಭಾಧ್ಯಕ್ಷರ ಹೆಸರು ಇವುಗಳನ್ನು ದಾಖಲಿಸಬೇಕು.
- ಸದಸ್ಯರ ಹಾಜರಾತಿಯನ್ನು ದಾಖಲಿಸಬೇಕು.
- ಸದಸ್ಯರ ಗೈರುಹಾಜರಾತಿಯ ವಿನಂತಿಯನ್ನು ದಾಖಲಿಸಬೇಕು.
- ವಿಷಯ ಪಟ್ಟಿಯ ವಿಷಯ ಹಾಗೂ ನಿರ್ಣಯಗಳನ್ನು ಸ್ಪಷ್ಟ ಭಾಷೆ ಹಾಗೂ ಶಬ್ದಗಳಲ್ಲಿ ಅಪಾರ್ಥ/ದ್ವಂದಾರ್ಥಕ್ಕೆ ಆಸ್ಪದವಿಲ್ಲದ ಹಾಗೆ ದಾಖಲಿಸಬೇಕು.
- ನಡುವಳಿಕೆ ಹೀಗೆ ಇರಲಿ: ಸತ್ಯವಾಗಿರಲಿ, ಸರಿಯಾಗಿ ಸಂಕ್ಷಿಪ್ತವಾಗಿ. ವ್ಯಾಕರಣ ಶುದ್ಧವಾಗಿ, ಸರಳ ಭಾಷೆಯಲ್ಲಿ ಅಪಾರ್ಥ/ದ್ವಂದಾರ್ಥಕ್ಕೆ ಅವಕಾಶವಿಲ್ಲದ ಹಾಗೆ. ಬರೆಯುವ ಪದ್ಧತಿ, ಭಾಷೆ ವಿಷಯಗಳಲ್ಲಿ ನಿರಂತರ ಏಕರೂಪತೆ, ನಿರ್ಣಯಗಳ ಮೇಲೆ ಕೇಂದ್ರೀಕೃತ.

### ಸಾಮಾನ್ಯ ಸಭೆ ಜರುಗಿಸುವ ಪೂರ್ವದಲ್ಲಿ ಕೈಕೊಳ್ಳಬೇಕಾದ ಕ್ರಮಗಳು ಮತ್ತು ಸಿದ್ಧತೆ:

1. **ಲೆಕ್ಕಪರಿಶೋಧನೆ ಕೈಕೊಳ್ಳಬೇಕು:** ಸಾಮಾನ್ಯ ಸಭೆಯ ದಿನಾಂಕ ನಿಗದಿಪಡಿಸುವ ಆಡಳಿತ ಮಂಡಳಿ ಸಭೆಯ ಪೂರ್ವದಲ್ಲಿ ಸಹಕಾರಿಯ ಲೆಕ್ಕಪರಿಶೋಧನಾ ವರದಿ ಕೈಗೊಂಡಿರಬೇಕು.
2. **ಆಡಳಿತ ಮಂಡಳಿ ಸಭೆ (ಅನುಪಾಲನಾ ವರದಿ):** ಲೆಕ್ಕಪರಿಶೋಧಕರು ಸಲ್ಲಿಸಿದ ಲೆಕ್ಕಪರಿಶೋಧನಾ ವರದಿಯು ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು, ವರದಿಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳಿಗೆ ಅನುಪಾಲನಾ ಸಿದ್ಧತೆ ಮಾಡಬೇಕು, ನಂತರ ಸಾಮಾನ್ಯ ಸಭೆ ಜರುಗಿಸುವ ಕುರಿತು ಚರ್ಚೆ ಮಾಡಬೇಕು.
3. **ದಿನಾಂಕ, ಸ್ಥಳ, ಸಮಯ ನಿಗದಿ :** ಆಡಳಿತ ಮಂಡಳಿ ಸಭೆಯಲ್ಲಿ ನಿಗದಿಪಡಿಸಬೇಕು,

- ಸಭೆಯ ದಿನಾಂಕ ನಿಗದಿಪಡಿಸುವ ಮುಂಚೆ (ಹಬ್ಬ, ಜಾತ್ರೆ, ರಜೆ ಕುರಿತು) ಯೋಚಿಸಬೇಕು.
- ಸಮಯ ಎಲ್ಲರಿಗೂ ಅನುಕೂಲವಾಗುವ ಸಮಯದಲ್ಲಿ ನಿಗದಿ. (ನಸುಕಿನ ಜಾವ, ರಾತ್ರಿ ಸಮಯ ಜರುಗಿಸತಕ್ಕದ್ದಲ್ಲ).
- ಸ್ಥಳ : ಸದಸ್ಯರ ಸಂಖ್ಯೆಯ ಅನುಗುಣವಾಗಿ ಸ್ಥಳವನ್ನು ನಿಗದಿಪಡಿಸಬೇಕು.

4. ಸಭೆಗೆ ಹಾಜರಾಗುವ ಸದಸ್ಯರ ಪಟ್ಟಿ.

### ಒಟ್ಟು ಸದಸ್ಯರ ಪಟ್ಟಿ

- ಸುಸ್ಥಿದಾರರ ಪಟ್ಟಿ.
- ಕನಿಷ್ಠ ವ್ಯವಹಾರ (ಐದು ವರ್ಷದಲ್ಲಿ ಎರಡು ವರ್ಷ ವ್ಯವಹಾರ).
- ಸಾಮಾನ್ಯ ಸಭೆ ಭಾಗವಹಿಸದವರ ಪಟ್ಟಿ (ಐದು ವರ್ಷದಲ್ಲಿ ಎರಡು ಸಾಮಾನ್ಯ ಸಭೆಗೆ ಹಾಜರಾಗದಿದ್ದರೆ).
- ಅರ್ಹಮತದಾರರ ಪಟ್ಟಿ (ಹಾಜರಾತಿ).
- ಒಂದು ವರ್ಷದೊಳಗೆ ಸದಸ್ಯನಾದವರ ಪಟ್ಟಿ .

ಇವುಗಳ ಆಧಾರದ ಮೇಲೆ ಏಪ್ರಿಲ್ 30ರೊಳಗೆ ಅರ್ಹಮತದಾರರ ಪಟ್ಟಿಯ ಆಧಾರದ ಮೇಲೆ ಉಪವಿಧಿಯಲ್ಲಿ ತಿಳಿಸಿರುವಂತೆ ಸಭೆಯ ನೊಟಿಸ್ಸು ಕಳುಹಿಸಬೇಕು

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Permitted to Post under Periodical Post as per the Letter G3/14/RNP/2024-25 DATE 29.09.2025

5. ಸಭೆಯ ಹಿಂದಿನ ದಿನ ಸಿಬ್ಬಂದಿಗಳಿಗೆ ಕಾರ್ಯನಿಯೋಜನೆ ಮಾಡಬೇಕು, ನೊಂದಣಿ, ವೇದಿಕೆ ಉಟೋಪಚಾರ, ನಡುವಳಿ ಬರೆಯುವವರು, ಕಲಾಪದ ನಿರ್ವಹಣೆ ಸೇರಿದಂತೆ ಇತರೆ ಕೆಲಸ ಕಾರ್ಯಗಳ ನಿಯೋಜನೆ.

**ಸಾಮಾನ್ಯ ಸಭೆ ಜರುಗಿದ ನಂತರ ಕೈಕೊಳ್ಳಬೇಕಾದ ಕ್ರಮಗಳು :**

- ಲೆಕ್ಕಪರಿಶೋಧನ ಇಲಾಖೆಗೆ ಒಂದು ವಾರದೊಳಗೆ ಲೆಕ್ಕಪ-ರಿಶೋಧಕರ ನೇಮಕಾತಿ ಬಗ್ಗೆ ಮಾಹಿತಿ ಸಲ್ಲಿಸಬೇಕು.
- ಲೆಕ್ಕಪರಿಶೋಧಕರವರಿಗೆ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ಅಧಿಕೃತ ಪತ್ರ ಕಳುಹಿಸಬೇಕು.
- ಸಭೆಯ ನಡವಳಿಕೆಗಳ ದೃಢೀಕೃತ ನಕಲನ್ನು ಸಭೆಯ ನಂತರದ 30 ದಿನಗಳೊಳಗಾಗಿ ನಿಬಂಧಕರು ಹಾಗೂ ಸಂಯುಕ್ತ ಸಹಕಾರಿಗೆ ಕಳಿಸಬೇಕು ಹಾಗೂ ಒಂದು ಪ್ರತಿಯನ್ನು ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು.
- ಸಭೆಯ ಕುರಿತು ಅವಲೋಕನ ಜರುಗಿಸಿ ಕಂಡು ಬಂದಿರುವ ನ್ಯೂನತೆಗಳನ್ನು ಮುಂಬರುವ ಸಾಮಾನ್ಯ ಸಭೆಯಲ್ಲಿ ಜರುಗದಂತೆ ಕ್ರಮವಹಿಸುವುದು ಹಾಗೂ ಒಳ್ಳೆಯ ಅಂಶಗಳನ್ನು ಮುಂದುವರೆಸುವುದು.

**ಸಾಮಾನ್ಯ ಸಭೆ ಜರುಗಿಸದಿದ್ದರೆ ಉಂಟಾಗುವ ಪರಿಣಾಮ:**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಪ್ರಕಾರ ಸೌಹಾರ್ದ ಸಹಕಾರಿ ಸಂಘಗಳು ನಿಗದಿತ ಅವಧಿಯೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ ಆಡಳಿತ ಮಂಡಳಿಯ ವಜಾ, ಕಾನೂನು ಕ್ರಮ, ಹಾಗೂ ದಂಡನೆ ಸೇರಿದಂತೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

- ಕಲಂ-38(v) ರಂತೆ ಒಂದು ಸಹಕಾರಿಯ ಮಂಡಲಿಯು ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ ಅಂದರೆ ಪ್ರತಿ ವರ್ಷ ಸೆಪ್ಟೆಂಬರ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ತಪ್ಪಿದರೆ ಸಹಕಾರಿಗೆ ಆಡಳಿತಾಧಿಕಾರಿ ನೇಮಕ ಮಾಡಬಹುದು.
- ಕಲಂ-68(2) ರಂತೆ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಪದಾಧಿಕಾರಿ, ಒಬ್ಬ ಮುಖ್ಯಕಾರ್ಯನಿರ್ವಾಹಕ, ಅಥವಾ ಯಾವೊಬ್ಬ ನೌಕರನು ಈ ಅಧಿನಿಯದಡಿಯಲ್ಲಿ ಅಗತ್ಯಪಡಿಸಿದ ಯಾವುದೇ ಕೃತ್ಯವನ್ನು ಮಾಡಲು ವಿಫಲನಾದರೆ ಅಥವಾ ರಚನೆ, ವ್ಯವಸ್ಥಾಪನೆ ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ನೆರವೇರಿಸಲು ವಿಫಲನಾದರೆ ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.
- ಕಾರ್ಯಯೋಜನೆ ಹಾಗೂ ನಿರ್ಣಯಗಳು ತೆಗೆದುಕೊಳ್ಳಲು ಸಾದ್ಯವಾಗದೇ ಆಡಳಿತ ಕುಂಠಿತಗೊಳ್ಳುತ್ತದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು - 560055 ದೂ : 080-23378375-80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080-23449933/34

ಇ-ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ-ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು - 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು - 560055 ದೂ: 080-23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821-2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ-590015 ದೂರವಾಣಿ: 0831-2401551.

ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ-585102. ದೂ: 08472-270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003